# ಜನಪದ ಮಂಗಳ ಗೀತೆಗಳು





ಜಯಶ್ರೀ ಗುತ್ತಲ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಯ ಪ್ರಕಟಣೆ

# ಜನಪದ ಮಂಗಲ ಗೀತೆಗಳು

ಪ್ರಧಾನ ಸಂಪಾದಕ

**ಡಾ. ಜೀ. ಶಂ. ಪರಮಶಿವಯ್ಯ**

ಸಂಪಾದಕಿ

**ಶ್ರೀಮತಿ ಜಯಶ್ರೀ ಗುತ್ತಲ**

# ಜನಪದ ಮಂಗಲ ಗೀತೆಗಳು


**ಸಂಪಾದಕಿ**

**ಶ್ರೀಮತಿ ಜಯಶ್ರೀ ಗುತ್ತಲ**



**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ**

೧೪/೩, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨

*JANAPADA MANGALA GEETHEGALU: A collection of Folk songs in Kannada, Collected and Edited by Smt. Jayashree Guttala, Published by Karnataka Jaanapada and Yakshagana Academy, Nripatunga Road, Bangalore-560 002, pp. viii + 64*

ಮೊದಲ ಮುದ್ರಣ : ೧೯೯೪

© ಹಕ್ಕುಗಳನ್ನು ಕಾದಿರಿಸಲಾಗಿದೆ

ಬೆಲೆ : ರೂ. ೧೫-೦೦

ಮುಖಪುಟ ವಿನ್ಯಾಸ : ಶ್ರೀ ಬಿ. ಜಿ. ಕನಕೇಶಮೂರ್ತಿ

ಮುದ್ರಕರು : ಜಯಲಕ್ಷ್ಮಿ ಪ್ರಿಂಟರ್ಸ್
೬೦೦ ೧೪ನೇ ತಿರುವು, ರಾಮಾನುಜ ರಸ್ತೆ, ಮೈಸೂರು-೪

# ಪ್ರಧಾನ ಸಂಪಾದಕರ ಮಾತು

ಉತ್ತರ ಕರ್ನಾಟಕದ ಜನಪದ ಸಾಹಿತ್ಯದ ಹೆಬ್ಬಾಗಿಲು ತೆರೆದದ್ದು ಮೂವತ್ತರ ದಶಕದ ಹಲಸಂಗಿ ಗೆಳೆಯರ ಕೊಡುಗೆಯ ಮೂಲಕ. ಕನ್ನಡ ಜನಪದ ಗೀತೆಗಳ ನರುಗಂಪು ಕನ್ನಡ ನಾಡಿನಾದ್ಯಂತ ಹರಡಿ ಈಹೊಸ ಗೀತಲೋಕದ ಕಡೆ ಎಲ್ಲರೂದೃಷ್ಟಿಹರಿಸುವಂತಾಯಿತು. 'ಗರತಿಯ ಹಾಡು', 'ಜೀವನ ಸಂಗೀತ' ಮತ್ತು 'ಮಲ್ಲಿಗೆದಂಡೆ' ಸಂಕಲನಗಳಲ್ಲಿ ವೈವಿಧ್ಯಪೂರ್ಣವಾದ ಗೀತೆಗಳು ಬೆಳಕುಕಂಡು ನಮ್ಮ ಜನಪದ ಸಾಹಿತ್ಯ ಪ್ರೇಮಿಗಳ ಕುತೂಹಲವನ್ನು ಕೆರಳಿಸಿದವು. ಕ್ರಮಕ್ರಮವಾಗಿ ಈ ಗೀತೆಗಳ ಸಾಹಿತ್ಯ ಸೌರಭ ನಾಡಿನ ಮೇಲೆಲ್ಲ ಹರಡಿ ಆ ಕಾಲಕ್ಕೆ ಪ್ರಸಿದ್ಧವಾಗಿದ್ದ ಎಲ್ಲ ಗಣ್ಯ ಸಾಹಿತಿಗಳೂ ಈ ಬಗ್ಗೆ ಅಪಾರ ಆಸಕ್ತಿಯಿಂದ ಕೆಲಸಮಾಡಲು ಪ್ರೇರಕವಾಯಿತು.

ಹಲಸಂಗಿ ಗೆಳೆಯರ ಅನಂತರ ಉತ್ತರ ಕರ್ನಾಟಕದ ಜನಪದ ಸಾಹಿತ್ಯದ ಭಂಡಾರದ ಬೀಗಮುದ್ರೆಯನ್ನು ತೆಗೆದವರು ಡಾ. ಬಿ. ಎಸ್. ಗದ್ದಗೀಮಠ ಅವರು ಅಪಾರವಾದ ಜನಪದ ಸಾಹಿತ್ಯ ರಾಶಿಯನ್ನು ಕಲೆಹಾಕಿ, ಸಂಪಾದಿಸಿ, ಪ್ರಕಟಿಸಿದ ಕೀರ್ತಿ ಅವರದು. ಜಾನಪದದಂಥ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಒಂದು ಕ್ಷೇತ್ರವನ್ನು ಆಯ್ಕೆಮಾಡಿಕೊಂಡು ಪಿಎಚ್.ಡಿ. ಮಾಡಿದ ಯಶಸ್ಸೂ ಅವರದೇ. ಕಂಬಿಯ ಹಾಡುಗಳು, ಹಂತಿಯ ಹಾಡುಗಳು, ದುಂದುಮೆಪದಗಳು, ಕೋಲಾಟದ ಪದಗಳು, ದೀರ್ಘಕಥನ ಕಾವ್ಯಗಳು ವಿವಿಧ ಸಂಪ್ರದಾಯದ ಹಾಡುಗಳು, ಸೋಬಾನೆಯ ಪದಗಳು-ಹೀಗೆ ವೈವಿಧ್ಯಮಯವಾದ ಹಾಡುಗಳನ್ನು ಕಲೆ ಹಾಕಿ ಕನ್ನಡ ಜನಪದಗೀತ ಸಾಹಿತ್ಯದ ಸಮೃದ್ಧಿಯನ್ನು ಪರಿಚಯಿಸಿದರು.

ಡಾ. ಗದ್ದಿಗೀಮಠರ ತರುವಾಯ ತರುಣಪೀಳಿಗೆಯ ಅನೇಕ ವಿದ್ವಾಂಸರು ಜಾನಪದ ಕ್ಷೇತ್ರವನ್ನು ಪ್ರವೇಶಿಸಿ ಕೆಲಸಮಾಡುತ್ತಾ ಬಂದಿದ್ದಾರೆ. ಶ್ರೀ ಜ್ಯೋತಿ ಹೊಸೂರ, ಡಾ. ಸೋಮಶೇಖರ ಇಮ್ರಾಪುರ, ಡಾ. ದೇವೆಂದ್ರಕುಮಾರ ಹಕಾರಿ, ಡಾ. ನಿಂಗಣ್ಣ ಸಣ್ಣಕಿ, ಡಾ. ಪಿ. ಕೆ. ಖಂಡೋಬ, ಡಾ. ಎಂ. ಎಸ್. ಲಕ್ಮೆ, ಡಾ. ಬಸವರಾಜ ಮಲಶೆಟ್ಟಿ, ಶ್ರೀ ಎಸ್. ಎ. ಕೃಷ್ಣಯ್ಯ ಇನ್ನೂ ಮೊದಲಾದವರು ಉತ್ತರ ಕರ್ನಾಟಕದ ಜನಪದ ಗೀತೆಗಳ ಬೇರೆ ಬೇರೆ ಪ್ರಕಾರಗಳನ್ನು ಪ್ರಕಾಶಗೊಳಿಸಿದ್ದಾರೆ. ಈ ಸಾಲಿನಲ್ಲಿ ಶ್ರೀಮತಿ ಜಯಶ್ರೀ ಗುತ್ತಲ ಅವರ ಸ್ತುತ್ಯ ಪ್ರಯತ್ನವನ್ನು ಅವರ 'ಜನಪದ ಮಂಗಲ ಗೀತೆಗಳು' ಸಂಕಲನದಲ್ಲಿ ಕಾಣಬಹುದಾಗಿದೆ.

'ಜನಪದ ಮಂಗಲ ಗೀತೆಗಳು' ಸಂಕಲನದಲ್ಲಿ ಉತ್ತರ ಕರ್ನಾಟಕದ ವಿವಿಧ ದೈವಗಳನ್ನು ಕುರಿತ ಹಾಡುಗಳ ಜೊತೆಗೆ, ಸೋಬಾನೆ ಹಾಡುಗಳೂ ಹೆಚ್ಚಾಗಿ ಸೇರಿವೆ. ಒಂದೆರಡು ಕೋಲಾಟದ ಪದಗಳೂ ಕಂಡುಬರುತ್ತವೆ. ಸಂಪ್ರದಾಯದ ಪದಗಳೂ ಹೆಚ್ಚಾಗಿ ಕಂಡುಬರುತ್ತವೆ. ಈ ಎಲ್ಲ ಹಾಡುಗಳನ್ನು ಶ್ರೀಮತಿ ಜಯಶ್ರೀ ಗುತ್ತಲ ಅವರು ಒಪ್ಪವಾಗಿ ಸಂಗ್ರಹಿಸಿಕೊಟ್ಟಿದ್ದಾರೆ. ಹಾಡುಗರ ಹೆಸರನ್ನು ಆಯಾ ಹಾಡಿನ ಕೆಳಗೇ ಸೂಚಿಸಿದ್ದಾರೆ. ಸ್ವತಃ ಗಾಯಕಿಯಾಗಿ ಹೆಸರುಮಾಡಿರುವ ಶ್ರೀಮತಿ ಜಯಶ್ರೀ ಗುತ್ತಲ ಅವರು ಈ ಸಂಕಲನವನ್ನು ಸಿದ್ಧಮಾಡಿ ಕೊಟ್ಟಿದ್ದಕ್ಕಾಗಿ ಅಕಾಡೆಮಿಯ ಪರವಾಗಿ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಪ್ರಕೃತ ಸಂಕಲನವನ್ನು ಸುಂದರವಾಗಿ ಅಚ್ಚುಮಾಡಿಕೊಟ್ಟ ಜಯಲಕ್ಷ್ಮಿ ಪ್ರಿಂಟರ್ಸ್ ಮಾಲಿಕರಾದ ಶ್ರೀ ಜಯಣ್ಣ ಮತ್ತು ಅವರ ಶ್ರೀಮತಿ ಮಂಜುಳಾ ಅವರಿಗೂ ರಕ್ಷಾಪುಟದ ಆಕರ್ಷಕ ಚಿತ್ರವನ್ನು ರಚಿಸಿಕೊಟ್ಟ ಉದಯೋನ್ಮುಖ ಕಲಾವಿದ ಶ್ರೀ ಕನಕೇಶಮೂರ್ತಿ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಜೀ. ಶಂ. ಪರಮಶಿವಯ್ಯ

ಮೈಸೂರು
೨೦-೧೦-೧೯೯೪



# ಅರಿಕೆ

ನನ್ನ ಪ್ರಥಮ ಜನಪದ ಗೀತ ಸಂಕಲನ "ಮಂಗಲ ಗೀತೆಗಳು" ಅರ್ಥಾತ್ ಸತಿ ಪತಿ ಸದ್ಗತಿ ಸಂಸಾರದ ಹಾಡುಗಳು ಕರ್ನಾಟಕ ರಾಜ್ಯ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ವತಿಯಿಂದ ಹೊರಬರುತ್ತಿರುವುದು ಸಂತೋಷದ ಸಂಗತಿಯಾಗಿದೆ. ನಾನು ಉತ್ತರ ಕರ್ನಾಟಕದ ಜನಪದ ಕಲಾವಿದೆ. ಹಾಗೂ ಅಕಾಡೆಮಿಯ ಸದಸ್ಯಳಾದ ನಂತರ ಅನೇಕ ಜಾನಪದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇನೆ. ಅಲ್ಲದೆ ಅನೇಕ ತೆರೆಯ ಮರೆಯ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸಿದ್ದೇನೆ. ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಸಂಚರಿಸಿ ಬಾಯಿಂದ ಬಾಯಿಗೆ ಪರಂಪರಾಗತವಾಗಿ ಬಂದ ಹಾಡುಗಳನ್ನು ಸಂಗ್ರಹಿಸಿ ನಮ್ಮ ಹಿಂದಿನ ಜನಪದ ಕಲೆಯನ್ನು ಪ್ರಚಲಿತಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಇದರ ಸಂಗಡ ಕಲಾವಿದರ ಅನಿಸಿಕೆಗಳನ್ನು ಕಲೆಹಾಕಿಕೊಂಡು ಕರ್ನಾಟಕ ಜಾನಪದ ಮಹಿಳಾ ವೇದಿಕೆಯ ನೋವು ನಲಿವು ಮುಖಾಂತರ ಸಹಾಯ ಸಲ್ಲಿಸಲು ಪ್ರಯತ್ನಿಸುತ್ತಿದ್ದೇನೆ.

ಈ ಕಾರ್ಯಕ್ಕೆಲ್ಲ ಪ್ರೋತ್ಸಾಹಿಸುತ್ತಿರುವ ನಮ್ಮ ಅಕಾಡೆಮಿ ಅಧ್ಯಕ್ಷರಾದ ಡಾ. ಜೀ. ಶಂ. ಪರಮಶಿವಯ್ಯ ಅವರಿಗೂ ಹಾಗೂ ಎಲ್ಲ ಸದಸ್ಯರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಸಂಕಲನ ಹೊರತರಲು ಸಲಹೆ ಸೂಚನೆ ಮಾರ್ಗದರ್ಶನ ನೀಡಿದ ಡಾ. ವೃಷಭೇಂದ್ರಸ್ವಾಮಿಯವರಿಗೂ ಡಾ. ಜಿ. ಆರ್. ಮನಿಕಟ್ಟಿ ಅವರಿಗೂ ಹೃತ್ಪೂರ್ವಕ ವಂದನೆಗಳು. ಈ ಹಾಡುಗಳನ್ನು ಬೆರಳಚ್ಚುಮಾಡಿ ಕೊಟ್ಟ ಶ್ರೀಯುತ ಶ್ರೀನಿವಾಸ ಕುಲಕರ್ಣಿಯವರಿಗೆ ಹಾಗೂ ಮುದ್ರಿಸಿದ ಮೈಸೂರಿನ ಶ್ರೀ ಜಯಲಕ್ಷ್ಮೀ ಮುದ್ರಣಾಲಯದವರಿಗೆ ಮತ್ತು ಎಲ್ಲ ತೆರೆಯಮರೆಯ ಕಲಾವಿದರಿಗೂ ಹಾಗೂ ಇಲ್ಲಿ ಹಾಡುಗಳನ್ನು ಹಾಡಿದ ಎಲ್ಲ ಕಲಾವಿದರಿಗೂ ವಿಶೇಷವಾಗಿ ಪ್ರೋತ್ಸಾಹಿಸುತ್ತಿರುವ ಪತಿ ಶ್ರೀಯುತರಾದ ಎಸ್. ಬಿ. ಗುತ್ತಲ ಅವರಿಗೂ ನನ್ನ ಅನಂತ ಧನ್ಯವಾದಗಳು.

ಶ್ರೀಮತಿ ಜಯಶ್ರೀ ಗುತ್ತಲ

೧೩, ನರಸಿಂಹಕೃಪ,
ಕೇಶವನಗರ, ಧಾರವಾಡ

| | |
|---|---|
| ಬೀಗರ ಜೀನತನದ ಹಾಡು | ೩೫ |
| ಬಳೆ ತೊಡಿಸುವ ಹಾಡು | ೩೬ |
| ಹೆಣ್ಣು ಒಪ್ಪಿಸುವ ಹಾಡು | ೩೮ |
| ಗಂಡಗಂಜಿ ಬದುಕು ಮಾಡವ್ವಾ | ೪೦ |
| ಮುತ್ತೈದೇರ ಆಶೀರ್ವಾದ | ೪೧ |
| ಮದುವಿ ಅರಿಶಿಣ ಹಚ್ಚುವ ಹಾಡು | ೪೨ |
| ಬೀಸುಕಲ್ಲಿನ ಪದ | ೪೫ |
| ಗೋದಿಕಲ್ಲಿನ ಪದ (ಬೀಸುಕಲ್ಲಿನ ಪದ) | ೪೭ |
| ಕೋಲು ಪದ | ೪೮ |
| ಶೀಗಿ ಹುಣ್ಣಿವೆ ಹಾಡು | ೪೯ |
| ತೊಟ್ಟಿಲ ಹಾಡು | ೫೦ |
| ಲಿಂಬೆಹಣ್ಣು | ೫೧ |
| ಒಕ್ಕಲುತನದ ಪದ | ೫೨ |
| ಹರಿಶ್ಚಂದ್ರ | ೫೩ |
| ಕಿತ್ತೂರ ಚೆನ್ನವ್ವಾ | ೫೬ |
| ಸಿಂಧೂರ ಲಕ್ಷ್ಮಣ ಪದ | ೫೭ |
| ಹೊಳಿ ಗಂಗವ್ವನ ಹಾಡು | ೫೯ |
| ಯಾವದು ಬಲು ಪಾಡು | ೬೧ |
| ಜೋ ಜೋ ಬಸವೇಶಾ | ೬೨ |
| ಗೌರಿ ಹಾಡು | ೬೩ |




# ದೇವತಾಸ್ತುತಿ ಪದಗಳು

## ಗಣಪತಿ ಹಾಡು-೧

ಪಾರ್ವತಿ ಸುತ ಗಣಪತಿ ದೇವಾ
ದಯಾ ತೋರೋ ದೀನರ ದಾತಾ

ಹರನ ಕಡೇನ ವರ ಪಡೆದವನೆ ನೀನೆ
ಶಜ್ಞಕೆ ವಿದ್ಯೆಕೆ ಶ್ರೇಷ್ಠನಾದವನೆ
ಬಂದ ವಿಘ್ನಗಳ ಬಯಲು ಮಾಡುವವನೇ
ಇಲಿಯ ಮೇಲೆ ಕುಂತು ಸಾರಾದವನೇ

ನಿಮ್ಮ ಮೇಲೆ ದಯೆಯಿಟ್ಟು ಬಯಸುವೆನು
ಕರುಣೆಯಿಟ್ಟು ಕಾಯುವೆನು

ಶ್ರೀ ಗುರುವೆ ನೀನು ಆಗು ಪ್ರಸನ್ನ
ನಿನ್ನ ಮೇಲೆ ಶುರುವಾಯಿತು ದಿನ ಗಾಯನ

ಪಾರ್ವತಿ ಸುತ ಗಣಪತಿ ದೇವಾ
ದಯ ತೋರೋ ದೀನರ ದಾತಾ

ಹಾಡಿದವರು : **ಫಕೀರಪ್ಪ ನಡಿಗೇರಿ**

## ಗಣಪತಿ ಪಾಡು-೨

ಆದಿಶಕ್ತಿ ತಾಯಿ ಪಾರ್ವತಿ ನೀ ದೇವಿ
ಮೈ ಬೆವತ ಮಣ್ಣು ತೆಗೆದಾಳ
ಮೈಯ ಬೆವತ ಮಣ್ಣು ತೆಗೆದಾಳ ಪಾರ್ವತಮ್ಮ

ಗಂಡ ಗೊಂಬಿ ಆಕಾರ ಮಾಡ್ಯಾಳ
ಜೀವಕಳೆ ಅದಕ್ಕೆ ತುಂಬ್ಯಾಳ ಪಾರ್ವತಿ
ಬಾಗಿಲ ಕಾಯಕ ನಿಲಿಶಾಳ

ಬಾಗಿಲ ಕಾಯುವ ಬಾಲಗ ಹೇಳ್ಯಾಳ
ಒಳಿಯಕ ಯಾರ್‍ಯಾರನು ಬಿಡಬೇಡ
ಒಳಗೆ ಯಾರ್‍ಯಾರನು ಬಿಡಬೇಡ ನನ ಮಗನ
ಜಳಕ ಮಾಡಾಕ ನಡೆದಾಳ

ಇರಬಿ ಎಂಬತ್ತು ಕೋಟಿ ಅನ್ನ
ಹಾಕ್ಯಾನ ಶಿವನ ಅರಮನಿ ದಾರಿ ಹಿಡದಾನ

ಅರಮನಿ ದಾರಿ ಹಿಡಿದಾನ ನಮ್ಮ ಶಿವನ
ಬಂದ ಬಾಗಿಲಿಗೆ ನಿಂತಾನ
ಬಾಗಿಲಿಗೆ ಕಾಯುವ ಬಾಲಕ ತಾ ನೋಡ

ದಾರಿ ಬಿಡಲಿಲ್ಲ ನಮ್ಮ ಶಿವಗ ಶಿಟ್ಟಲಿ
ಶಿವರಾಯ ಬಿಟ್ಟಾನ ತ್ರಿಸೂಲ ಬಾಲಕನ
ಚೆಂಡ ಸಮ ದೂರದ ಹೊರಗಿನ ಸಪ್ಪಳ ಕೇಳ್ಯಾಳ
ಪಾರ್ವತಿ ಓಡಿ ಬಂದಾಳ ಬಾಗಿಲಿಗೆ

ಓಡಿ ಬಂದಾಳ ಬಾಗಿಲಿಗೆ ಪಾರ್ವತಿ ಮಗನ ಮೈಮೇಲೆ ಬಿದ್ದಾಳ
ಅಯ್ಯ ಅಯ್ಯ ಶಿವರಾಯ ಇದೇನು ಮಾಡಿದಿ



ನನ್ನ ಮಗನಾರ ಕೊಂದೆಲ್ಲೊ ಶಿವರಾಯ ಮುನ್ನೂರ
ಜಲ್ಮ ಪಡಬೇಕ ಬಾಗಿಲ ಕಾಯಂತ ದ್ವಾರಪಾಲಕ
ಕೇಳ ಉತ್ತರ ದಿಕ್ಕಿಗೆ ಹೋಗಬೇಕ ಉತ್ತರ ದಿಕ್ಕಿಗೆ

ಮಲಗಿದವನ ಶಿರಾನ ಬೇಗನೆ ತರಹೋಗ
ಉತ್ತರ ದಿಕ್ಕಿಗೆ ಮಲಗಿದ ಆನಿಯ ಚೆಂಡ ತಂದು ಅಲ್ಲಿ
ಕೊಟ್ಟಾನ ಆನಿಯ ನೀ ಚಂಡ ಕೂಸಿಗೆ ಕೂಡಿಸಿ

ಜೀವ ಕಳೆಯ ಪಡೆದಾನ ಗಣಪತಿ ಹುಟ್ಟಿಬಂದಾನ
ಭೂಮಿಗೆ ಗಣಪಯ್ಯ ಹುಟ್ಯಾನೆಂದ ಎಲ್ಲಾ ರ ಕರದಾರ
ಮನೆಮನೆಗೆ ಪೂಜಿ ಮಾಡ್ಯಾರ ಮನೆಮನೆಗೆ ಪೂಜೆ
ಮಾಡ್ಯಾರ ಗಣಪಯ್ಯ ಡೊಳ್ಳಹೊಟ್ಟಿಯಲ್ಲಿ ತುಂಬ್ಯಾನ
ಉಂಡ ಹೊಟ್ಟಿಯ ಮೇಲೆ ಕೈಯ್ಯಾಡಿಸಿ ಗಣಪಯ್ಯ

ಉಪಾಯದಿಂದ ಹೊಂಟಾನ ಗಣಪಯ್ಯ ಎಡವಿ ಬಿದ್ದಾನ
ಭೂಮಿಗೆ ಆವಾಗ ಗಣಪಯ್ಯನ ಪಾಯಸ ಹೊರಗೆ
ಬಂದಿತು ಬಿದ್ದ ಪಾಯಸ ನೋಡಿ ಬಳಬಳದು ತುಂಬ್ಯಾನ
ಹೊಟ್ಟಿಗಿ ಹಾವ ಸುತ್ಯಾನ ಹೊಟ್ಟಿಗಿ ಹಾಂವ ಸುತ್ಯಾನ
ಮ್ಯಾಗಿರುವ ಚಂದ್ರಾಮ ನೋಡಿ ನಕ್ಯಾನ ರೂಪಾರ ತಾಳಾನ

ಚಂದ್ರಗ ಶ್ಯಾಪ ಕೊಟ್ಯಾನ ನಾನು ಹುಟ್ಟಿ ದಿವಸ ನೀನ್ಯಾರ
ನೋಡಿದರ ಅವರಿಗೆ ಅಪವಾದ ಬರತೈತಿ

ಹಾಡಿದವರು : ಫಕೀರಪ್ಪ ನಡಿಗೇರಿ

## ಪಾರ್ವತಿ ಸ್ತೋತ್ರ

ಪಾಲಿಸು ತಾಯೆ । ಪಾರ್ವತಿ ಕಾಯೇ ।
ಚಿರಸೌಭಾಗ್ಯವ ನೀನೆಮಗೀಯೆ ॥ ಪ ॥

ಜಗದಾಧಾರಿ । ಕರುಣಾವಾರಿ
ಕುಂಕುಮ ಶೋಭಿತ । ಶಂಕರಜಾಯೆ ॥ ೧ ॥

ಹಿಮಗಿರಿ ಜಾತೆ । ಅಮರ ಸಂಗೀತೇ ।
ನಮಿಸುವೆ ಮಾತೆ ನಿಜ ಸುಖದಾತೆ ॥ ೨ ॥

ಶ್ರೀಕಂಠ ಕವೀ । ಮಂಗಲಗೀತೆ
ನೀ ಕಿವಿಯಿಂದಾಲಿಸು ಜಗಮಾಯೆ ॥ ೩ ॥

ಕಾಪಾಡೆ ಕರುಣೆ । ಭಾರತ ಧರಣಿ ।
ಭಾಗ್ಯದಾಯಿನೀ । ದಯದೋರಿ ನೀ ॥ ೪ ॥

ಬಡವರ ಭವಣೆ । ಬಿಡಿಸೆ ಭವಾನಿ ।
ಕಲಿದುಲಿ ಹರಣೆ । ಕೃಪೆ ಮಾಡಿ ನೀ ॥ ೫ ॥

ಭುವನ ಕಲ್ಯಾಣಿ । ಪಾವನ ಚರಣೆ ।
ಗಿರಿರಾಜ ಸಧನಿ ಕರುಣೆ ಮೃಡಾಣಿ ॥ ೬ ॥

ಪಾಲಿಸು ತಾಯೆ । ಪಾರ್ವತಿ ಕಾಯೇ ।
ಚಿರಸೌಭಾಗ್ಯವ ನೀನಮಗೀಯೆ ॥ ೭ ॥

ಹಾಡಿದವರು : **ಗಂಗೂತಾಯಿ ಅಣ್ಣಿಗೇರಿ**



## ಬನಶಂಕರಿ ಸ್ತೋತ್ರ

ಬಾದಾಮಿ ಬನಶಂಕರೀ ।
ದಯತೋರೆ ಗಿರಿರಾಜ ಸುಕುಮಾರೀ ॥ ಪ ॥

ನೀರನಾರೀ । ನದೀ ಸರಸ್ವತಿ
ತೀರವಾಸೀ । ಸಿವೆ ಪಾರ್ವತಿ
ಗಿಡಬಳ್ಳಿ ಬನ ಸುಂದರೀ ॥ ೧ ॥

ಆದಿಮಾಯೆ । ಶಾಕಂಬರೀ
ವೇದಗ್ಯೆಯೆ । ಜಗದೀಶ್ವರಿ
ಭವತಾರೀ ಭುವನೇಶ್ವರೀ ॥ ೨ ॥

ಭ್ರಮರಾಂಬೇ । ಭವತಾರಿಣೀ
ನಮಿಸುವೆ । ಹರಿವಾಹಿನೀ
ಶ್ರೀಕಂಠನಾತಿ ಮೋದಿನಿ ॥ ೩ ॥

## ಪಂಢರಪುರ ವಿಠೋಬನ ಹಾಡು

ವಿಠ್ಠಲನ ಗುಡಿಯು ಯ್ಯಾರ್‍ಯಾರ ಕಟ್ಟಿಶಾರ
ಮುತ್ತಿನ ಮಾಲಿ ತಿರವ್ಯಾರ । ಹೂವಿನ

ವಿಠ್ಠಲಗ ಹೋಗುವವರು ।
ಏನೇನ ವಯ್ಯುತಾರ । ಹೂವಿನ ಮಾಲಿ
ಕಾಯಿ ಕರ್ಪೂರ ತುಳಸಿ ಮಾಲಿ । ಒಯ್ಯುತಾರ ಹೂವಿನ ॥ ೧ ॥

ವಿಠ್ಠಲನ ಗುಡಿಯಾಗ ಯಾರ್‍ಯಾರು ಇರತಾರ ।
ವಿಠ್ಠಲರ ತಮ್ಮ ಪುಂಡಲೀಕ ಇರತಾರ । ಹೂವಿನ
ವಿಠ್ಠಲನ ತಮ್ಮ ಪುಂಡಲೀಕ ಇರತಾನ ।
ವಿಠ್ಠಲನ ಮಡದಿ ರುಕ್ಮಿಣಿ ಇರತಾಳ । ಹೂವಿನ ॥ ೨ ॥

ವಿಠ್ಠಲನ ನೆನದರ ಇದ್ದಷ್ಟು ಬಂಗಾರ ।
ಉಟ್ಟಿರುವ ಸೀರಿ ಜರತಾರ ।
ವಿಠ್ಠಲನ ಗುಡಿಯಾಗ ಸಾಧು ಸಂತರ ಬಾಳ ।
ನಿಂತ ಭಜನೆಯು ಮಾಡುವರ ಹೂವಿನ ॥ ೩ ॥

ವಿಠ್ಠಲನ ಗುಡಿ ಮುಂದ ಹರಿಯುವ ನದಿ ಯಾವುದ ?
ಚಂದ್ರಭಾಗಾ ಹರೇ ಹೊಳಿಯು । ಹೂವಿನ
ಬಂಗಾರದ ಪಲ್ಲಕ್ಕಿ ಬೆಳ್ಳಿಯ ಎಳಿ ಹಗ್ಗ ।
ಸಿಗ್ಗಟಿಯಿಂದ ಎದಿಹಾದೆ ಹೂವಿನ ॥ ೪ ॥

ಆಡಿರಿ ಆಳಂಬಿ ನೋಡಿರಿ ಪಂಢರಪುರ ।
ಪಂಢರಪುರದಲ್ಲಿರುವ ವಿಠ್ಠಲರ ॥

ಹಾಡಿದವರು : **ಶ್ರೀಮತಿ ಶಾರದಾಬಾಯಿ ನಾಗರಗಜ ಉಪ್ಪಾರ**



## ಎಲ್ಲಮ್ಮನ ಹಾಡು-೧

ಸರಿಯುಗಾಣೆನು ಧರಣಿಯೊಳಗಮ್ಮ
ಕರುಣಿಯೆಲ್ಲಮ್ಮಾ ॥ ಪ ॥

ಪ್ರಥಮ ಕೃತಯುಗದೊಳಗೆ ಪರಶಿವಗೆ ನೀ
ಪತ್ನಿಯಾಗಿ ನಿತ್ಯ ಮೆರೆದೆ ರಜತಗಿರಿಯೊಳಗೆ
ಕೃತಕ ಮಧು ಕೈಟಭರ ಪ್ರಾಣವ ಹತಿಯ ಮಾಡಿದಿ
ಯುದ್ಧ ಮುಖದೊಳು ಹಿತವ ತೋರಿದಿ ಸುರ ಸಮೂಹಕೆ
ಪ್ರೀತಿಯದುಂಟೆ ನಿನ್ನ ಮಹಿಮೆಗೆ ॥ ೧ ॥

ತ್ರೇತಾಯುಗದೊಳಗೆ ಜನಿಸಿ ನೀ ಸೀತೆ ನಾಮದಿ ರಾಮಚಂದ್ರನ
ಪತ್ನಿಯೆಂದೆನಿಸಿ ಕೋತಿ ಬಳಗವ ಕೂಡಿಕೊಂಡು
ಸೇತುಬಂಧನ ಮಾಡಿ ಕಲಹತಿ ಪಾತಕಿ ರಾವಣನ ಕುಲವನು
ಪಾತ ಮಾಡಿದಿ ಪೂತಳೆನಿಸಿ ॥ ೨ ॥

ದ್ವಾಪರ ಯುಗದಲ್ಲಿ ದ್ರುಪದನಿಗೆ । ನೀ ಪುತ್ರಿಯಾಗಿ
ಪತ್ನಿಯಾದೆ ಪಂಚಪಾಂಡವರಿಗೆ ಪಾಪಿ ಕೌರವ
ದುಶ್ಯಾಸನ ತಾಪನ ಕೊಡಲು ನಿನ್ನ ಜನ್ಮಕೆ
ಕೋಪಜ್ವಾಲೆಯ ತಾಳಿ ನರಕದ ಕೂಪದೊಳು ಕುರುಕುಲವ ಕೆಡಹಿದಿ ॥ ೩ ॥

ಕಲಿಯುಗದೊಳಗಾದಿಯೆಲ್ಲಮ್ಮಾ । ಸುಲಲಿತದಿ ಜಮದಗ್ನಿ
ಋಷಿಗೆ ಭಾರ್ಯಳಾದೆಮ್ಮ ಕುಹಕಾರಿ
ಕಾತ್ರ್ಯವೀರ್ಯನ ತಲೆಯ ಕೊಯಿಸಿ ಬಿಟ್ಟೆಯಮ್ಮಾ
ಮಲಹರ ಶಿಶುನಾಳಧೀಶಗೆ ಒಲಿದೆ ಉಗರಗೊಳ್ಳದಮ್ಮಾ ॥ ೪ ॥

## ಎಲ್ಲಮ್ಮನ ಹಾಡು-೨

ನಿನಗಿಲ್ಲೇಳರಾವ ಹ್ಯಾಂಗ ದೂರೆದಾಳ ಎಲ್ಲಮ್ಮ
ತನುಮನಧನ ಮೂರು ತ್ಯಾಗನ ಮಾಡಿ । ಮನ ಮಂತ್ರವ
ಮನದೊಳಗಾಡಿ । ಮಹಾ ನಿಶ್ಚಳ ಆದ್ಯವ್ವ ತಾಯಿ
ಆತ್ಮಲಿಂಗಕ ಬಾಗಿದ ತಾಯಿ ॥ ೧ ॥

ಮೂರುವರಿ ಮಳ ಮನೆಯ ಸೂರಿನ
ಮಂಗಳವಾರ ದಿನ ನಿನ ಶೃಂಗಾರ
ಮಹಾನಿತ್ಯಯ ಪೂಜೆಯಿಂದ ನಿತ್ಯದಿಂದ ನೇಪಾಲಿಸಿ ನಡಿ
ಆಗ ಬರತಾಳ ಎಲ್ಲವ್ವ ॥ ೨ ॥

ಸತ್ತ್ಮಳ್ಳ ಜೋಗುಳ್ಳ ಬಾವಿಗೆ ನಡಿಯ
ಆರವು ಮರವು ಎರಡು ಕಾಯಿಗಳ ವಡಿಯ
ಯಕ್ಕಯ್ಯ ಜೋಗಯ್ಯ ಎಂಬುವ ನುಡಿಯ
ನಿತ್ಯದಿಂದ ನೀ ಪಾಲಿಸಿ ನಡಿಯ ಆಗ ಬರತಾಳ ಎಲ್ಲವ್ವ ॥ ೩ ॥

ವಸದಿಯೊಳು ತೇರದಾಳಕ್ಕ ನಡಿಯ ಸಿದ್ಧರಾಮನ
ಪಾವನ ಹಿಡಿಯ ಸತ್ಯ ಶರಣರು ಹೇಳಿದ್ದ ನುಡಿಯ
ನಿತ್ಯದಿಂದ ನೀ ಪಾಲಿಸಿ ನಡಿ
ಆಗ ಬರತಾಳ ಎಲ್ಲಮ್ಮ ॥ ೪ ॥

ಹಾಡಿದವರು : **ಗಂಗೂತಾಯಿ ಅಣ್ಣಿಗೇರಿ**



## ಎಲ್ಲಮ್ಮನ ಪದ-೩

ಜಯ ಜಗದಂಬಿಕೆ ಜಯ ಜಯ ರೇಣುಕೆ
ಪರ್ವತ ವಾಸಿಸ್ಯೆ
ಜಯ ತ್ರಿಪುರಾಂಬಿಕೆ ಜಯ ಮೂಕಾಂಬಿಕೆ
ಸುರಗಣ ಜನಮಾನ್ಯೆ

ಜಮದಗ್ನಿ ಸತಿ, ಮಂಗಲಗಾತ್ರಿ
ಪರಶುಧರ ಜನನಿ
ನಗಸುತೆ – ವಿಶ್ವವಿಮೋಹಿನಿಪಾವನಿ
ವ್ಯಾಕುಲನಾಶಿನಿ

ಕುಂಕುಮ ಚಂದನ ಕಸ್ತೂರಿ ಭಂಡಾರ
ಶೋಭಾಂಕಿತ ವದನೆ
ಶಾಂತ ಸುಹಾಸಿನಿ ತ್ರಿಲೋಕ ಪಾಲಿನಿ
ಚಂದ್ರಬಿಂಬಾನನೆ

ಏಳುಕೊಳ್ಳದ ಹೇ ದುರ್ಗೇಶ್ವರಿ
ದುರ್ಗತಿ ನಾಶಿನಿ
ಕಾಳರಾತ್ರಿ ಹೇ ಜ್ವಾಲಾಮಾಲಿನಿ
ಮಹಿಷ ನಿಷೂದಿನಿ

ಸರ್ವ ಮಂಗಳೆ ಮುಕ್ತಿಕಾರಿಣಿ
ಅವಿರತ ಆನಂದೆ
ಚಿದಂಬರ ಸುತೆಗೊಲಿದ ಮಹಾಮ್ಮಾಯಿ
ಉಧೋ ಉಧೋ ರೇಣುಕಾಂಬೆ

ಹಾಡಿದವರು : **ಭಾಗೀರಥಿಬಾಯಿ ದಾನೆ**

## ಆರತಿ ಹಾಡು

ಭಕ್ತಿಯಿಂದ ಬೆಳಗುವೆನು । ಸತ್ಯ ಸಂಕಲ್ಪನಿಗೆ ಏಕಾರತಿಯನು
ಸತ್ ಚಿತ್ತ ಮೂರುತಿಗೆ ನೀಲಾಂಜನವನು
ವಿಶ್ವಪತಿ ಸಖನಿಗೆ ಧೂಪಾರತಿಯನು ॥ ೧ ॥

ಹೇಮವತಿ ಧವ ಅವನು ಭವ ದೇಹಿ ನಾನು
ಭವ ಪರಿಹರಿಪನವನು । ಭಯಬೀತೆ ನಾನು
ಭವರುದ್ರ ಹರಾ ಅವನು ಭಾವರಹಿತಳು ನಾನು
ಭೀಮಶಂಕರ ಅವನು ಕಿಂಕರಳು ನಾನು ॥ ೨ ॥

ನಂದಿವಾಹನ ಅವನು ಮಂದ ಬುದ್ಧಿಯು ನಾನು
ಇಂದುಶೇಖರ ಅವನು ಭವಬಂದಿ ನಾನು
ಗಂದುಗೊರಳಾನ ಅವನು । ಕುಂದುಳ್ಳವಳಾನು
ಆನಂದಮಯ ಅವನು ನೊಂದವಳು ನಾನು ॥ ೩ ॥

ಪರಮ ಪಾವನ ಅವನು ನರದೇಹಿ ನಾನು
ಕಲ್ಯಾಣಕರಾ ಅವನು ಕಲುಷ ನಾನು
ಕೈವಲ್ಯಪತಿ ಅವನು ಕಾಕುಮನದವಳಾನು
ಲೋಕವಂದ್ಯನು ಅವನು ಸಂದೇಹಿ ನಾನು ॥ ೪ ॥

ಭಾವೆಂಬ ತೈಲ । ಏಕಮನಸಿನ ಬತ್ತಿ
ಹೃದಯವೆಂಬ ಪಣತಿ ತಂದಿರುವೆನು
ಸೂರ್ಯಾಗ್ನಿ ಶಶಿನೇತ್ರ । ಕೋಟಿ ಪ್ರಕಾಶನಿಗೆ
ಗಂಗಾತರಂಗ ಹರ ಶಿವಪಂಚಮುಖನೆ ॥ ೫ ॥

ಜಯ ಜಯ ಪರಮೇಶ । ಕೈಲಾಸವಾಸಿನ
ಜಯ ಜಯ ರವಿತೇಜ ಭವ ದುಃಖಹಾರಿನ್
ಜಯ ಜಯ ತ್ರಿಪಾದಾರಿ ಕಲಿಕುಷಹಾರಿನ್
ಜಯ ಜಯ ತ್ರಂಬಕೇಶ್ವರ ಅಭಯಕಾರಿ ॥ ೬ ॥

ಹಾಡಿದವರು : **ಗಂಗೂತಾಯಿ ಅಣ್ಣಿಗೇರಿ**



## ಗೌರಿ ಹಾಡು

ಚೈತ್ರ ಗೌರಿಯನು ಏಕ ಚಿತ್ತದಲೆ
ಪತ್ರ ಪುಷ್ಪದಿಂ ಪೂಜಿಸಿದೆ
ವಸಂತ ಗೌರಿಯು ವಲಿದು ಬರಲೆಂದು
ಅನಂತ ಪುಷ್ಪದಲರ್ಚಿಸಿದೆ ॥ ೧ ॥

ವಟಸಾವಿತ್ರಿಯ ಸಖಿಯರೊಡಗೊಂಡು
ಕಡು ಹರುಷದಿ ಕಥೆ ಕೇಳಿದೆ
ನಾಗರ ಪೂಜೆಯ ದಿವಸ ಕುಮಾರಿಯು
ಕರುಣಿಸಲೆಂದ್ವರ ಬೇಡಿದೆ ॥ ೨ ॥

ಶುಕ್ರವಾರ ಸಿರಿ ಗೌರಿ ಮಾಲಕುಮಿಯ
ಆಲಯದೊಳಗಿಟ್ಟು ಅರ್ಚಿಸಿದೆ
ವರಮಾಲಕ್ಷ್ಮಿಯ ಚರಣಕೆರಗಿ
ಸಿರಿ ಸಂಪದ ಕೊಡು ಎಂದು ಪ್ರಾರ್ಥಿಸಿದೆ ॥ ೩ ॥

ಹರತಾಲಿಕೆಯನು ಕರವೀರ ಕುಸುಮದಿ
ಅರ್ಚಿಸಿ ನಾ ಆರಾಧಿಸಿದೆ
ವಿಜಯವನೀಯುವೆ ಗಜಗೌರಿಯನಾ
ಪೂಜಿಸಿ ಪುನೀತಳಾಗಿದ್ದೆ ॥ ೪ ॥

ತ್ರಿಜಗನ್ಮೋಹಿನಿ ಪಾರ್ವತಿದೇವಿಯ
ಹಿರಿಯ ಗೌರಿ ಚರಣವ ಪಿಡಿದೆ
ಮಾರ್ಗಶಿರ್ಷದ ಮಹಾಲಕ್ಷ್ಮೀ
ನಾಲಿಕ್ಷ್ಮಿಸಿ ಮೋಕ್ಷವ ಕೇಳಿದೆ ॥ ೫ ॥

ಶಾಖಂಬರಿಯನು ಶಾಸ್ತ್ರೋಕ್ತದಿಂದಲಿ
ಪೂಜಿಸಿ ನಾ ಶರಣಾಗಿದ್ದೆ
ಶಿವಶಕ್ತಿ ಮಹಮಾಯಿ ರೇಣುಕೆ
ಕರುಣಿಸೆಂದು ಕರ ಮುಗಿದಿದೆ ॥ ೬ ॥

ದಾನವ ಮರ್ದಿನಿ ಶರಣ ಸಂಜೀವಿನಿ
ದಾನನವನೇರಿಸಿ ಸ್ತುತಿಗೈದೆ
ಮನ್ನಿಸಿ ಕಾಯೆಂದು ಖಗಳಾಂಬೆಯು
ಶ್ರೀ ತಂಳಜಾತಾಯಿಯ ಪ್ರಾರ್ಥಿಸಿದೆ ॥ ೭ ॥

ಸರ್ವಮಂಗಳ ಶಾಂತರೂಪಿಣಿಯ
ಅಂತರಂಗದಲಿ ಸ್ಮರಿಸಿದೆ
ಗಂಗಾಮಾತೆಯು ಪ್ರಯಾಗರಾಣಿಯು
ಪ್ರಸನ್ನಳಾಗಲೆಂದು ವಂದಿಸಿದೆ ॥ ೮ ॥

ಹಾಡಿದವರು : ಗಂಗೂತಾಯಿ ಅಣ್ಣಿಗೇರಿ



# ಮದುವೆ ಮಂಗಲದ ಶೋಭಾನದ ಪದಗಳು

## ಹಸೆಮಣೆಯ ಸೋಬಾನ ಪದ

ಅಕ್ಕಿಯ ಹಾಸಿಗೆಯ ಹೊಯ್ದು
ಅಚ್ಚ ಮುತ್ತೈದೆಯರು ಅಕ್ಕಿ ಅಕ್ಕೆಂದರ ಅಕ್ಕಿನ
ಪಾವಿನ ಅಕ್ಕಿ ಬೆಳೆಯೋದು ಮಲೆನಾಡ
ಸೊ ಅನ್ನಿರೆ ಸೋಬಾನವೆನ್ನಿರೆ ॥ ೧ ॥

ಜೋಳ ರಾಶಿಯ ಹೊಯಿರೆ
ಜೋಡ ಮುತ್ತೈದೆಯರು ಜೋಳ ಜೋಳೆಂದರ
ಜೋಳವ ಪಾವಿನ ಜ್ವಾಳ ಬೆಳೆವುದು ಬೆಳವಲು
ಸೋ ಅನ್ನಿರೆ ಸೋಬಾನವೆನ್ನಿರೆ ॥ ೨ ॥

ಗೋದಿಯ ಹಾಸಿ ಹೊಯಿರೆ ಹರದೆ ಮುತ್ತೈದೆಯರು
ಗೋದಿ ಗೋದೆಂದರ ಗೋದಿನ ಪಾವಿನ
ಗೋದಿ ಬೆಳವುದು ಎರಿನಾಡ
ಸೋ ಅನ್ನಿರೆ ಸೋಬಾನವೆನ್ನಿರೆ ॥ ೩ ॥

ಹವಳ ಹಾಸಿಗೆಯಿರೆ ಹರದೆ ಮುತ್ತೈದೆಯರು
ಹವಳ ಹವಳೆಂದರ ಹವಳದ ಪಾವಿನ
ಹವಳ ಬೆಳೆವುದು ಹಡಗಾನ
ಸೋ ಅನ್ನಿರೆ ಸೋಬಾನವೆನ್ನಿರೆ ॥ ೪ ॥

ಮುತ್ತಿನ ಅಚ್ಚ ಮುತ್ತೈದೆಯರ ಅತ್ತೊಂದು ಮುತ್ತು
ಸಿಡಿಲೆಂದು ಮುತ್ತ ಮುತ್ತ ಅಂದರೆ
ಮುತ್ತಿನ ಪಾವನು ಮುತ್ತ ಬೆಳವುದು
ಸಮುದರ ಸೋ ಅನ್ನೀರೆ ಸೋಬಾನವೆನ್ನಿರೆ ॥ ೫ ॥

ಹಾಡಿದವರು : **ಬಸವ್ವ ಕಲ್ಲಪ್ಪ ಶಿವಳ್ಳಿ**

## ಕಾಲು ತೊಳೆಯುವ ಹಾಡು

ಸೋ ಎನ್ನಿ । ಸೋಬಾನನೆನ್ನಿ ॥ ಪ ॥

ಅಳಿಯ ದೇವರ ಪಾದ । ತೊಳೆಯಲಿ ಬಂಗಾರ
ಅತ್ತಿ ಮಾವರು ಪ್ರೀತಿಯಿಂದಲಿ
ಅತ್ತಿ ಮಾವರು ಪ್ರೀತಿಯಿಂದಲಿ ಪನ್ನೀರ
ಎತ್ತಿ ತಂಬಿಗೆಯ ಸುರಿವ್ಯಾರ ॥ ೧ ॥

ಶಿವನ ಎಡಭಾಗಕ್ಕೆ ಪಾರ್ವತಿ ಕುಂತಾಗ ।
ಮಡದಿ ಗಂಡನ ಎಡಭಾಗಕ್ಕೆ ।
ಮಡದಿ ಗಂಡನ ಎಡಭಾಗಕ್ಕೆ ಕುಂತಾಳ ।
ಮಡನೀರ ಪಾದಕ್ಕೆ ಎರದಾಳ ॥ ೨ ॥

ಅಳಿಯ ದೇವರಂತ । ತಿಳಿದು ಅತ್ತಿ ಮಾವ
ತೊಳೆದು ಪಾದಪೂಜೆ ಮಾಡಿ ಸಂತೋಷದಿ ।
ತಂದ ಆಹೀರ ಮಾಡ್ಯಾರ ॥ ೩ ॥

ಸತಿ ಪತಿ ಏರ್‍ಯಾರ । ಸಂಸಾರದ ತೇರ
ಕುಲ ಕುಲ ಕಿಲಿ ಕಿಲಿ ನಗತಾರ ।
ಕುಲ ಕುಲ ಕಿಲಿ ಕಿಲಿ ನಗತಾರ ।
ಸತಿಪತಿ ಸದ್ಗತಿ ಸಂಸಾರ ॥ ೪ ॥

ಸರತಿ ಗಂಗವ್ವ । ಬಾರ ನೀಲವ್ವ ।
ಆರತಿ ಬೆಳಗವ್ವ ನಿಂಗವ್ವ ।
ಆರತಿ ಬೆಳಗವ್ವ ನಿಂಗವ್ವ ಬೇಗನೆ ।
ಒಡಪಿಟ್ಟು ಹೆಸರ ಹೇಳವ್ವ ॥ ೫ ॥

ಹಾಡಿದವರು : **ಪಾರ್ವತವ್ವ ಮುತ್ತಿಗಿ**



## ಸೋಬಾನ ಪದ

ಸೋಬಾನದಿಂದ ಸುಖದಿಂದ ಸೋಬಾನಾವೇ
ಅಣ್ಣಾ ಮದಲಿಂಗ ಅಣ್ಣಯ್ಯ ಮದಲಿಂಗ
ಅಣ್ಣಾ ನನ್ನಯ್ಯ ಮದಲಿಂಗ ಸೋಬಾನವೇ
ಅಣ್ಣಾ ನನ್ನಯ್ಯಾ ಮದಲಿಂಗನಾದರೆ
ಹೆಣ್ಣಾ ಕೊಡಿರಮ್ಮ ಸುಖದಿಂದ ಸೋಬಾನವೇ

ಕಣಗಾಲ ಮರದಡಿ ಅಣ್ಣಾನ್ಮದಲಿಂಗ ಮಾಡಿ
ಗಿಣ್ಣೀಕ್ಕೆ ಬರುವ ಬಿದಿರೆಲ್ಲೂ ಸೋಬಾನವೇ
ಗಿಣ್ಣೀಕ್ಕೆ ಬರುವ್ಹೋ ಚೆದುರೇನ್ನಮ್ಮಣ್ಣಾಗೆ
ಹೆಣ್ಣಾ ಕೊಡಿರಮ್ಮ ಸುಖಬಾಳೀ ಸೋಬಾನವೇ

ಅತ್ತಿಯ ಮರದೂರ ಹತ್ತೇಳು ಕರೆದೂರ
ಹೆತ್ತೂ ಮದುವಣ್ಣ ಕುದುರೇಯ ಸೋಬಾನವೇ
ನಿಮ್ಮತ್ತೇ ಕಾಲಿಗೆ ಶರಣೆನ್ನೂ ಸೋಬಾನವೇ
ಶರಣೆಂದು ಕಾಲಿಗೆ ಸಾಸೀರೀಳ್ಯವ ಕೊಟ್ಟು
ಶ್ರೀ ಗೌರಿ ಎಂಬ ಮಗಳನ್ನು ನಾವ್ ಕೊಟ್ಟು
ಉಯ್ಯಾಡ್ ಬಯ್ಯಾಡ್ ಸುವೀರಿ ಸೋಬಾನವೇ

ನಾವೇಕೆ ಉಯ್ಯಾನ ನಾವೇಕೆ ಬಯ್ಯಾನ
ನಮ್ಮಮ್ಮಗಂಜಿ ನಮಗಂಜಿ ಸೋಬಾನವೇ
ನಮ್ಮಮ್ಮಗಂಜಿ ನಮಗಂಜಿ ಸೋಬಾನವೇ
ನಮ್ಮಮ್ಮಗಂಜಿ ನಮಗಂಜಿ ನಡೆದರೆ
ಹುಯ್ಸಾ ಒಂದ್ಹಣ ಕಡಗದಾ ಸೋಬಾನವೇ
ಹುಯ್ಸಾ ಒಂದ್ಹಣ ಕಡಗವಾ ಸೋಬಾನವೇ

ಹಾಡಿದವರು : **ಪಾರ್ವತವ್ವ ಹೊಸಮನಿ**

## ಶೋಭಾನ ಪದ

ಹಂದರ ಹಾಕ್ಯಾರ ಹನ್ನೆರಡ ಗಾವಕ್ಕ
ಬಿಂಗ ಬೀಶಾರ ತರತರಕ ಬಿಂಗನ ಬಿಗಿಶಾರ
ತರತರಕ ಈ ಮನೆಯ ಚೊಚ್ಚಲ ಮಗನ ಮದುವಿಯ
ಸೋ ಅನ್ನೀರೆ ಸೋಬಾನವೆನ್ನೀರೆ ॥ ೧ ॥

ಚಪ್ಪರ ಹಾಕ್ಯಾರ ಇಪ್ಪತ್ ಜಾವಕ್ಕ
ಮುತ್ತ ಬಿಗಿಶಾರ ತರತರಕ ಮುತ್ತನ ಬಿಗಿಶಾರ
ತರತರಕ ಈ ಮನಿಯು ಚೊಚ್ಚಲ ಮಗನ
ಮದವೀಯ ಸೋ ಅನ್ನೀರೆ ಸೋಬಾನವೆನ್ನೀರೆ ॥ ೨ ॥

ಹಿತ್ತಲದಾಗಿನ ಉತ್ತತ್ತಿ ಗಿಡ ಹತ್ತಿರವ ನೋಡ್ಯಾರ
ಅಳಿಯಾರ ಚೆಲುವಿಕಿ ಒಪ್ಪದವನ ನನ್ನ ಮಗಳಿಗೆ
ಸೋ ಅನ್ನೀರೆ ಸೋಬಾನವೆನ್ನೀರೆ ॥ ೩ ॥

ಕಣಕ ಕುಟ್ಟುವ ಬಿಟ್ಟು ಆಕಳ ಹಿಂಡುದ ಬಿಟ್ಟು
ಬಾಗಿ ನೋಡ್ಯಾರ ಅಳಿಯಾರ ಚೆಲುವಿಕಿ
ಒಪ್ಪದಾನನ ನನ್ನ ಮಗಳಿಗೆ ಸೋ ಅನ್ನೀರೆ
ಸೋಬಾನವೆನ್ನೀರೆ ॥ ೪ ॥

ಬಾಗಿಲದ ನನ್ನ ಬಳಿ ಬಾಗೀ ನೋಡ್ಯಾರ
ಅಳಿಯಾರ ಚೆಲುವಿಕಿ ಒಪ್ಪದಾನನ ನನ್ನ ಮಗಳಿಗೆ
ಸೋ ಅನ್ನೀರೆ ಸೋಬಾನವೆನ್ನೀರೆ ॥ ೫ ॥

ಹಂದರದಾಗ ಬಂದ ಬೀಸೂವ ಗಾಳಿ
ಇನ್ನೊಂದ ಜಾವ ಸಿನಗಾಳಿ
ಕಂದಪ್ಪನ ದಾರಿ ಕೊಡತೀವಿ ಸೋ ಅನ್ನೀರೆ
ಸೋಬಾನವೆನ್ನೀರೆ ॥ ೬ ॥



ಕುಂಬಳಕಾಯಿಗೆ ಕುಡಗೋಲ ಕೊಟ್ಟಾಂಗ
ಕೊಟ್ಟೇವ್ರಿ ನಿಮ್ಮ ಕೈಕೆಳಗ
ನಾವಿನ್ನ ನಿಮ್ಮ ಸರಿಮಗಳ ಮಾಡಿ
ಸಲಹುವಿರಿ ಸೋ ಅನ್ನೀರೆ ಸೋಬಾನವೆನ್ನೀರೆ ॥ ೭ ॥

ಹಾಡಿದವರು : **ಬಸಮ್ಮ ಕಲ್ಲಪ್ಪ ಶಿವಳ್ಳಿ**

## ಮದುಮಗಳಿಗೆ ಅರಿಶಿಣ ಹಚ್ಚುವ ಹಾಡು

(ಜಾಲ : ಮಾವನ ಮಗಳೇ ಎಂಬಂತೆ)

ಮಂದಗುಮನಿ ಬಾ । ಚಂದಿರ ಮುಖಿ ಬಾ ।
ಸುಂದರಾಂಗಿ ಬಾರೇ । ಗಂಧವ ಧರಿಸುವೆ ।
ಚಂದದಿಂದ ನೀ । ಮುಂದೆ ಕೈಯ್ಯ ತಾರೇ ॥ ಪ ॥

ಮಣಿ ಮಂಚದಿ ಮಂಗಲ । ಸ್ನಾನವ ಮಾಡಿಸುವೇ ।
ಕುವರಿ ಬಾರೇ । ಹಣೆಗೆ ಕುಂಕುಮ ಹಚ್ಚುವೇ
ಮದುವೆಯ ಹಂದರದೊಳು ನೀರೆ ॥ ೧ ॥

ಪ್ರೇಮದಿ ಕಟ್ಟುವೆ ಹೂವಿನ ದಂಡೆಯು ।
ಮುದ್ದು ಮುಖವ ತೋರೆ
ಕಾಮನಂಥ ಗಂಡನ ಕೈಹಿಡಿಯಲು
ಕಾಮಿನಿ ಮಣಿ ಬಾರೆ ॥ ೨ ॥

ವನಿತಾಮಣಿ ಸೌಭಾಗ್ಯ ಲಕ್ಷ್ಮಿ ನೀ ।
ನಾಗು ಬೇಗ ಬಾರೇ । ಪ್ರಣಯದಕ್ಕ ತಂಗಿಯರು ಬಂದಿಹರು
ಮಣಿ ಮಂಚವನೇರೇ ।
ಕೊರಳಿಗೆ ಕರಿಮಣಿ ಮಂಗಲ ಸೂತ್ರವ । ॥ ೩ ॥

ಕಟ್ಟಿ ಮೆರೆಯು ಬಾರೇ ।
ಜರಿಪೀತಾಂಬರ ಜರದ ಕುಪ್ಪಸವ ।
ತರುಣಿ ಧರಿಸು ಬಾರೇ ॥ ೪ ॥



ಕರಿಗಮನಿಯೆ ನಿನ । ಗರಿಷಿಣ ಧರಿಸುವೆ ।
ಸರಿಸಿಜಾಕ್ಷಿ ಬಾರೇ । ಹರದೆಯರಾನಂದದಿ ಬೆಳಗುವಿರಾ ।
ರತಿಯು ನಿನಗೆ ನೀರೇ ॥ ೫ ॥

ಹಾಡಿದವರು : **ಚೆನ್ನವ್ವ ಹರಿಜನ**

## ಅರಿಶಿಣ ಕುಟ್ಟುವ ಹಾಡು

ಸುವ್ವಿ ವರದಲಕ್ಷ್ಮೀ ನಾರಾಯಣಗೆ – ಸುವ್ವಾಲೆ ॥ ಪ ॥

ಎರಗಿ ಗಣಪಗೆ ಬ್ರಹ್ಮನ ರಾಣಿಗೆ ಶ್ರೀ
ಹರಿಯ ಮದುವೆಗೆ ಶುಭದಿಂದ
ಅರಿಷಿಣ ಕುಟ್ಟುತ್ತ ಐವರು ಪಾಡುತ್ತ
ಅರಸಿಯರ್ ನೆರೆದರೆ ನಿಜ ವೈಭವದಿ ॥ ೧ ॥

ಬಟ್ಟು ಬಟ್ಟುರಾಳಿಯ ಮಾಡ್ವೋರು
ಬಟ್ಟು ಕಂಬೆಗ್ಳಿಯ ನೆರೆವೋರು
ಅಚ್ಯುತರಾಯನ ಮಡದಿ ಮೈತೊಳೆವೋರೆ
ಮಿತ್ರರು ಪಾಡಿ ಕುಟ್ಟಿದರಿಶಿನವ ॥ ೨ ॥

ಸಂಕಲಿಕೆಗೆ ಬಟ್ಟಸಿಡುವೋರು
ಮಾರದಂಚಿಗೆ ತಂದು ತೊಡೆವೋರು
ಯಂತ್ರವಾಹಕನ ಮದುವೆಗೆಂದೆನುತಲಿ
ಮಂತ್ರಾಕ್ಷತೆಗೆ ಕುಟ್ಟಿದರಿಶಿನವ ॥ ೩ ॥



## ಹಸೆಗೆ ಕರೆಯುವ ಹಾಡು-೧

ಭಾಮಿನಿ ಬಾರೆಲೆ ವಯ್ಯಾರದಿಂದಲಿ ॥ ಪ ॥

ಕುಲುಕುತ ಬಳಕುತ ಹೆಜ್ಜೆಯನಿಕ್ಕುತ
ಸಖಿಯರೊಡನೆ ಬೇಗ ಸರಸಂಗಳಾಡುತ ॥ ಅ. ಪ ॥

ಕಾಸಿನ್ ಸೀರೆನುಟ್ಟು ಜರತಾರಿ ರೌಕೆ ತೊಟ್ಟು
ಕಾಸಗಲ ಕುಂಕುಮವಿಟ್ಟು ಪೀಠಕೀಗಲೆ ॥ ೧ ॥

ಕೆಂಪಿನೋಲೆ ಹಾಕಿ ಮಿನುಗುವೋ ಮೂಗುತಿಯಿಟ್ಟು
ಕೊರಳು ಹಾಕಿದ ಸರ ಎಡಕೆ ಬಲಕೆ ಒಲಿಯುತ ॥ ೨ ॥

ತೋಳಬಂದಿ ಮೆರೆಸುತ ಕಡಗ ಕೈಯ್ಯನು ತಿರವುತ
ಕಾಲಗೆಜ್ಜೆ ಘಲಘಲೀರೆಂದು ಶಬ್ದ ಮಾಡುತ ॥ ೩ ॥

ಹಾಡಿದವರು : **ಶ್ರೀಮತಿ ಸೇತೂಬಾಯಿ ವಸಂತರಾವ್ ಮಿರ್ಜಿ**

## ಹಸೆಗೆ ಕರೆಯುವ ಹಾಡು-೨

ಬಾರೆ ಕಮಲಾಕ್ಷಿಯೆ ಹಸೆಗೆ ನೀನು ॥ ಪ ॥

ಚಿನ್ನದ ಮಂಟಪ ರನ್ನದ ಮೇಲ್ಕಟ್ಟು
ಚೆನ್ನಾಗಿ ಅಲಂಕಾರ ಬಣ್ಣಿಸಿ ಕರೆಯುವೆ ॥ ೧ ॥

ಅರಿಷಿಣ ಕುಂಕುಮ ಬೆರಸಿ ಆರತಿಯ
ಪರಿಪರಿ ವಿಧದಿಂದ ಹಾಡುತ್ತ ಕರೆಯುವೆ ॥ ೨ ॥

ಮರುಗ ಮಲ್ಲಿಗಿ ಜಾಜಿ ಸುರಗಿ ಶಾವಂತಿಗೆ
ಪರಿಪರಿ ವಿಧ ಪುಷ್ಪ ಪಿಡಿದು ಕರೆಯುವೆ ॥ ೩ ॥



## ವರಪೂಜೆ ಹಾಡು

ವರಪೂಜೆಯ
ವರನ ಪೂಜೆಯ ಮಾಡಿದನು ಹಿಮವಂತನು
ತರುಣಿ ಮೇನಕೆಯೊಡನೆ ॥ ಪ ॥

ಹರನ ಶಂಕರನ ಶಶಿಧರನ ಮೃದುಕರನ
ಸುರನರಾದಿ ಸೇವಿತ ಸುಂದರನ ॥ ಅ. ಪ ॥

ಚಿನ್ನದ ಹರಿವಾಣವ ತಂದಿರಿಸುತ
ಸನ್ನುತಾಂಗನ ಪಾದವಾ
ಚಿನ್ನದ ಗಿಂಡಿಯ ಪನ್ನೀರಿನಿಂದಲಿ
ಚೆನ್ನಾಗಿ ತೊಳೆದನೆ ನಲಿಯುತಲಿ ॥ ೧ ॥

ನೂತನ ಸುರಪಾರಿಜಾತ ಮಾಲೆಯನು । ಸಂ
ಪ್ರೀತಿಯಿಂದರ್ಪಿಸುತ
ಪೀತಾಂಬರ ರತ್ನಖಚಿತಾಭರಣಂಗಳ
ಪ್ರೀತಿಯಿಂ ಸರಸರನೆ ॥ ೨ ॥

ಸುರಲೋಕ ಚಂದನ ಘಮ ಘಮಿಸುತಲಿರೆ
ಪರಿಮಳ ಪುನಗಪೀಡಿ
ಮರುಗ ಮಲ್ಲಿಗೆ ಜಾಜಿ ಸುರಗಿ ಸಂಪಿಗೆ । ಪ
ನ್ನೀರನ್ನಚ್ಚುತಲಿ ॥ ೩ ॥

ವರಧೂಪದೀಪ ವಿರಚಿಸಿ ನೈವೇದ್ಯಕೆ
ಪರಿಪರಿ ಭಕ್ಷ್ಯವ
ಇರಿಸಿ ನಿವೇದನ ಮಾಡಿ ದಕ್ಷಿಣೆ
ಬೆರಸಿ ತಾಂಬೂಲ ನೀಡಲು ॥ ೪ ॥

ಮಗಳ ಕೈ ಹಿಡಿಯುತವಿಗೆ ಪಾಲಿಸು । ನ
ಮ್ಮಗಳನೆನುತ ಬೇಡುತ
ಮಗುಳೆ ಮಗುಳೆ ಪಾದಂಗಳಿಗೆ ತಲೆಬಾಗಿ
ನಗುತ ಕೊಂಡಾಡುತ ॥ ೫ ॥

ಹಾಡಿದವರು : **ಶ್ರೀಮತಿ ಸರಸ್ವತಿ ಕೃಷ್ಣಾಪುರ**



## ಮದುವೆಯ ಹಾಡು

ಮದುವೆ ಮಾಡಿದರ । ಮುತ್ತೈದೆರು ಮಂಗಲ ಹಾಡಿದರ ॥ ಪ ॥

ಹಂದರ ಹಾಕಿದರ । ಮೊದಲು ಹಾಲ್ಗಂಬವ ನಿಲಿಸಿದರ ।
ಚಂದದಿ ತಳಿರನು । ತಂದು ಕಟ್ಟಿದರ । ಬೀಗರೆಲ್ಲರು ಬಂದರ ॥ ೧ ॥

ಅರಿಶಿಣ ಹಚ್ಚಿದರ । ಪರಿಮಳ ಗಂಧವ ಪೂಸಿದರ ।
ನೆರೆದ ಸತಿಯರ ಮೋದದಿಂದಲೆ । ಆರತಿ ಬೆಳಗಿದರ । ॥ ೨ ॥

ಊರಿಗೆ ಉಣಿಸಿದರ । ಕರಿಗಡಬಿನ ಊಟವ ಹಾಕಿದರ ।
ಕರಿದ ಸೆಂಡಗಿ ನೀಡಿ ತುಪ್ಪಕೆ । ಕೊರತಿಯ ಮಾಡಿದರ ॥ ೩ ॥

ತಕ್ಕ ಸಮಯ ನೋಡಿ । ಅಕ್ಕಿ ಕಾಳಿಗೆ ಅಣಿ ಮಾಡಿ ।
ಅಕ್ಕರದಿಂದಲೆ ಎಲ್ಲರು ಬಂದು । ಅಕ್ಷತೆ ಚೆಲ್ಲಿದರ ॥ ೪ ॥

ಹಾಡಿದವರು : **ಶ್ರೀಮತಿ ಸರಸ್ವತಿ ಕೃಷ್ಣಾಪುರ**

## ಬಾಸಿಂಗ ಕಟ್ಟುವ ಹಾಡು

ಸೋ ಅನ್ನೆ ಸೋಬಾನ ಬನ್ನೇ ॥ ಪ ॥

ಬಾಸಿಂಗ ಮೇಲಿರುವ ಸೂಸಾಡು ಗಿಳಿರಾಮು ದೇಸಲ್ಲಿ
ನಿಮ್ಮ ದಳವೆಲ್ಲಿ । ಮದುಮಗನ
ಬಾಸಿಂಗ ಮೇಲೆ ಬಲಬಂದೆ ಸೋ ॥ ೧ ॥

ದಂಡೆಯೊಳು ಒರಗಿರುವ ಮಂಡುದ ಗಿಳಿರಾಮು
ತೊಂಡಲಪ್ಪ ತೂಗಿ ದಳವೆಲ್ಲಿ । ಮದುಮಗಳ
ದಂಡೆಯಾ ಮೇಲೆ ಬಲಬಂದೆ ॥ ೨ ॥

ಬಾಸಿಂಗ ತರುವಾಗ ಸೂಸಾಡಿ ಮಳೆಯಾಗಿ
ಬಾಸಿಂಗ ಚಿಗಿತು ಬನವಾಗಿ । ನಮ್ಮೂರ
ಕೂಸ ಬಡವರಿಗೆ ನೆರಳಾಗಿ ॥ ೩ ॥

ದಂಡೆಯನು ತರುವಾಗ ತೊಂಡುದ ಮಳೆಯಾಗಿ
ದಂಡೆಲ್ಲಿ ಅರಳಿ ಹೂವಾಗಿ । ಗೊನೆಬಿಟ್ಟು
ಪುಂಡ ಮದುಮಗನ ಫಲವಾಗಿ ॥ ಸೋ ॥ ॥ ೪ ॥

ಗುಂಡು ಮಲ್ಲಿಗೆ ಹೂವ ತೊಂಡಲದ ನನೆದಂಡೆ
ಇಂಡಿ ಕೊರಳೊಳಗ ಬಾಸಿಂಗ । ಹೂವನು
ಕೊಂಡು ಮೆರಸಿದರ ಬೆಳತನಕ ॥ ಸೋ ॥ ॥ ೫ ॥

ಮದುಮಗನ ಬಾಸಿಂಗ ಮದುಮಗಳ ನನೆದಂಡೆ
ಪಡಪಿನಲೆ ಮೆರೆಸಿ ಬೆಳತನಕ । ಹಾಡಿದರ
ಚೆದುರೆಯರು ಕೂಡಿ ನಾಗುಲ ॥ ಸೋ ॥ ॥ ೬ ॥



ಪೇಟಿ ಪೇಟೆಯ ಗುಂಟ ಕೂಟಕೂಟಕ ನಿಂತು
ದಾಟೆನಲಿ ಮೆರೆದು ಮನೆಗೊಗಲು । ಹಡದವ್ವ
ತಾಟಬಾನ್ನತ್ತಿ ಇಳಿದೊಗೆದು ॥ ಸೋ ॥ ॥ ೭ ॥

ಹಾಡಿದವರು : **ಶ್ರೀಮತಿ ಸರಸ್ವತಿ ಕೃಷ್ಣಾಪುರ**

## ಒಳಕಲ್ ಪೂಜೆ ಹಾಡು

ಕಲ್ ಪೂಜಿ ಮಾಡಲಿಕ ನನ್ಯಾರು ಕರಸ್ಯಾರ
ಸಾಲಮೊಳಗಿ ಮನಿಯವಳ । ಸುವ್ವಿ ಸುವ್ವಿ ಸುವ್ವಾಲೆ

ಸಾಲು ಮೊಳಗಿ ಮನಿಯವಳ ತಂಗ್ಯವ್ವ ಕಲ್ ಪೂಜಿಗಿ
ಕರಶ್ಯಾಳ । ಸುವ್ವಿ ಸುವ್ವಿ ಸುವ್ವಾಲೆ

ಸಾಲಮಾಳಗೀ ಮನಿಯವಳ ತಂಗೆವ್ವ
ಒಳಪೂಜಿಗಿ ಕರಿಶ್ಯಾಳ
ಪಿಲ್ಯಾದಗಾಲ ಮಗಳ ಸಂಗಮ್ಮಗ ಪಲ್ಲಕ್ಕಿ ಕೊಟ್ಟು ಕರಶ್ಯಾರ
ಮಂಟಿಗಗಾಲ ಮಗಳ ಸಂಗಮ್ಮಗ ಒಂಟೆ
ಶೃಂಗರಿಸಿ ಕಳಿವ್ಯಾರ. ಸುವ್ವಿ ಸುವ್ವಿ ಸುವ್ವಾಲೆ

ಹಂದರ ಮ್ಯಾಲಿನ ಕಣಕಿ ನಂದಿ ಮೆಯ್ದಾವರಃ
ಬಿಚ್ಚಿ ಬಿಳಿಯ ಹರಿವ್ಯಾರ ಸುವ್ವಿ ಸುವ್ವಿ ಸುವ್ವಾಲೆ

ಬಿಚ್ಚಿ ಬಿಳಿಯಲಿ ಹರವ್ಯಾರ, ತಮ್ಮಗ ಅಣ್ಣ ಮಾಡ್ಯಾನ
ಮದವೀಯು, ಸುವ್ವಿ ಸುವ್ವಿ ಸುವ್ವಾಲೆ ॥

ಹಾಡಿದವರು : ಬಿ. ಎಮ್. ಚಾಕುಬ್ಬಿ



## ಐರಾಣಿಯ ಹಾಡು

ಜಾಣ ಕುಂಬಾರನ ಮನಿ ಯಾವ ಕಡಿಗದ ।
ಕಪ್ಪುರದ ತಿಪ್ಪಿ ಎಡ ಬಲ । ಸೋ ॥ ೧ ॥

ಕಪ್ಪುರದ ತಿಪ್ಪಿ ಎಡಬಲ ಮಾಡಿಕೊಂಡು ।
ಜಾಣ ಕುಂಬಾರನ ಮನಿಗ್ಯಾದ । ಸೋ ॥ ೨ ॥

ಮುಂಜಾಳಿ ಕುಂಬಾರಣ್ಣಾ ಮಸರ ಬಾನುಂಡಾನ ।
ಹಾರ್‍ಯಾರಿ ಕೆಸರ ತುಳದಾನ । ಸೋ ॥ ೩ ॥

ಹಾರಿ ಹಾರೀ ಕೆಸರ ತುಳದು ತಾ ಮಾಡ್ಯಾನ ।
ನಾದ್ಯಾರ ಹಾರುವ ಒಂದ್ಯೆಯ ರಾಣಿ । ಸೋ ॥ ೪ ॥

ಕಡಗದ ಕೈಯಿಕ್ಕಿ ಕೊಡವಿ ಕುಂಬಾರವ್ವ ।
ಕೊಡದ ಮ್ಯಾಲ್ಯಾನ ಬರದಾಳಾ । ಸೋ ॥ ೫ ॥

ಕೊಡದನೆ ಮ್ಯಾಲ್ಯಾನ ಬರದಾಳ ನಮ್ಮೂರ ।
ಬಾಳಿ ಬನದಾನೊಂದರ ಗಿಣಿಯು । ಸೋ ॥ ೬ ॥

ಹಾಡಿದವರು : ಬಿ. ಎಂ. ಚಾಕುಬ್ಬಿ

## ಸೋಬಾನ ಪದ

ಮುತ್ತೈದಿ ಹುಣ್ಣಿವಿ ದಿವಸ ಹುಟ್ಟಿದಾಕೆ
ನನ್ನ ಮಗಳ ಕೊಟ್ಟ ಅರಿಷಿಣ ನೀನಾದೆ ಮಗಳೆ
ಸೋಬಾನವ ॥ ೧ ॥

ಕನ್ನೆ ಕುಮಾರಿ ನಿನ್ನ ಬಣ್ಣ ಬಂಗಾರ ವರ್ಣ ಲಿಂಬಿಯು
ಹಣ್ಣ ನಿನ್ನ ಬಣ್ಣ ಸೋಬಾನವ
ದೇವಲೋಕದವರು ನೋಡಲಿ ಬಂದಾರವ್ವ ॥ ೨ ॥

ನಿನ್ನ ಆಡಿ ಹರಿಶಾರ ಹತ್ತೂರೊಳಗ ಸೋಬಾನವ
ಹಾಡಿ ಹರಿಶಾರ ಹತ್ತೂರೊಳಗ
ಮಲ್ಲಮ್ಮನಂಥಾ ಮಗಳ ಮರಿಯದಿರು ನೀ ॥ ೩ ॥

ಶ್ರೀ ಗುರುವಿನ ಜ್ಞಾನ ಮಲ್ಲಯ್ಯನಂಥಾ ಗುರುವಿನ
ಕಾಣ ಸೋಬಾನವ
ದೇಶದೊಳಗ ಸಿಗ್ಗಟ್ಟ ವಾಸಿಸುವ ಗುರು ಅಹುದಮ್ಮ
ವಾಸು ಪತ್ರವ ಪಡಿಯಮ್ಮ ಸೋಬಾನವ ॥ ೪ ॥

ಹಾಡಿದವರು : **ಶ್ರೀಮತಿ ಶಾರದಾಬಾಯಿ ನಾಗರಾಜ ಉಪ್ಪಾರ**



## ಬೀಗರ ಜೀನತನದ ಹಾಡು

ಇವರು ಬಲು ಜೀನರಂತ । ಮೊದಲೀಗೆ ತಿಳಿಯಲಿಲ್ಲ
ಮನಿತನ ನೋಡಲಿಲ್ಲ । ಇವರ ಗುಣ ಅಳಿಯಲಿಲ್ಲ ॥ ಪ ॥

ಸಿಂಗಾರ ಸರಗಿ ಹಾಕಲಿಲ್ಲ । ಬಂಗಾರ ಬಳಿ ಮಾಡಿಸಲಿಲ್ಲ
ಮಂಗ ಮಲಕು ಮಾಡಿ ಇವರು ।
ಮದುವೀ ಮಾಡಿಬಟ್ಟರಲ್ಲ ॥ ೧ ॥

ಮದವೀ ಚಂದ ಆಗಬೇಕಂತ ।
ರೊಕ್ಕ ಖರ್ಚು ಆಗಬಾರದಂತ ।
ನಿಬ್ಬಣ ಏನೂ ತರಬಾರದಂತ
ಅಕ್ಕಿ ಕಾಳು ಬೀಳಬೇಕಂತ ॥ ೨ ॥

ಪುಟ್ಟಿ ರೊಟ್ಟಿ ಬಡಿಬೇಕಂತ
ಕಟಗಿ ಕುಳ್ಳು ಸುಡಬಾರದಂತ
ಚಹಾ ಪಹಾ ಕುಡಿಬಾರದಂತ
ಚಲೋ ಶೀರಿ ಉಡಬಾರದಂತ ॥ ೩ ॥

ದೊಡ್ಡ ಕೊಡ ಹೊರಬೇಕಂತ
ಗಡಗೀಲೆ ನೀರು ತರಬೇಕಂತ
ಮನ್ಯಾಗೊಂದು ಹರಿವಿಲ್ಲಂತ
ಹಂಡೇವಂತೂ ಕಂಡಿಲ್ಲಂತ ॥ ೪ ॥

ಮೊದಲಿನ ದೊಡ್ಡ ಮನಿತನಂತ
ಅಕ್ಕ ತಂಗಿ ಹಿರಿತನಂತ
ಇವರ ಮನಿ ಗಿರಿಜವ್ವನಂತ
ಸಾಲಿ ಪಾಲಿ ಕಲಿತಾಕೆಂತ ॥ ೫ ॥

ಹಾಡಿದವರು : **ಶ್ರೀಮತಿ ಸೇತುಬಾಯಿ ವಸಂತರಾವ್ ಮಿರ್ಜಿ**

# ಬಳೆ ತೊಡಿಸುವ ಹಾಡು

ಬಳೆಯು ನೀಡಲಿಕೆ ಬಂದ ಭಾಮೆಯರನ್ನೆ ಕಂದ
ಬಳೆಯು ನೀಡಲಿಕೆ ಬಂದ ಬೆಡಗುಗಾರ ಬಾಯಿಂದ ॥ ಪ ॥

ಕೈತಾರೆ ಬಾರೆಂದ ಬಳೆಯು ನೀಡಲಿಕೆ ಬಂದ
ಹಸಿರು ನೀಲಿಯು ಬಳೆ ಹಸುಮುಖಿಯೆ ಬಾರಮ್ಮಾ
ಹೊಸ ಪರಿಯ ಬಳೆಯ ನೀಡುವೆ ಶಶಿಮುಖಿಯೇ ಬಾರಮ್ಮಾ ॥ ೧ ॥

ಊದಕಾಯವಾದ ಬಳಿಯು ಕಾಜು ಮಾಟದ ಬಳೆಯು
ಹೊಸಪರಿಯ ಬಳೆಯ ನೀಡುವೆ ಶಶಿಮುಖಿಯೇ ಬಾರಮ್ಮಾ ॥ ೨ ॥

ಇಂದ್ರ ನೀಲವಾದ ಬಳೆ ರಂಗುರಂಗಿನ ಮಾದರಿ ಬಳೆ
ಚಂದ್ರಮುಖಿಯೆ ಬಾರೆ ನೀನು ಬಳಿಯ ತೊಡಿಸುವೆ ನಾನು ॥ ೩ ॥

ಹಾಡಿದವರು : **ಶ್ರೀಮತಿ ಸೇತುಬಾಯಿ ವಸಂತರಾವ್ ಮಿರ್ಜಿ**



# ಬೀಗರ ಹಾಡು

ನೋಡ ಸಖಿ ನಮ್ಮ ವೈಭವ ಈ ವೈಭವ
ನೋಡ ಸಖಿ ನಮ್ಮ ವೈಭವ ॥ ಪ ॥

ಆನೆ ಕುದುರೆ ಒಂಟೆ ಅಂಬಾರಿ ಮತ್ತೆ ಮಹಲ ಮನಿಯು
ನೋಡ ಸುಡುತಿಹವು ಬಿಸಿಯು ನೀರು ಒಡನುತಿಹನು
ಜಾಯಬೇಡಿ ॥ ೧ ॥

ಜನರ ಸಾಲು ಸಾಲು ನೋಡೆ ಅಳಿಯನ ಕಡೆಯು ಬಳಗ
ನೋಡೆ ಮತ್ತೆ ಎತ್ತಿನ ಸವಾರಿ ನೋಡೆ ಬೀಗರ ವೈಯ್ಯಾರಿ
ತನುವ ನೋಡೆ ॥ ೨ ॥

ಮುತ್ತು ಮಾಣಿಕ್ಯ ನೋಡೆ ಮತ್ತೆ ಹಣದ ಚೀಲ
ನೋಡೆ ಸತ್ಯ ಸುಗುಣ ಅಳಿಯ ನೋಡ ಚೆಲುವ ಚೆನ್ನಿಂಗ
ಅಳಿಯನ ನೋಡ ॥ ೩ ॥

ಮುದ್ದು ಮುಖದ ಬಾಲೆ ನೀನು ಥರಥರದಾರುತಿಯ
ಮಾಡೆ ಗುಂಡು ಮುಖದ ಬಾಲೆಯನ್ನ ಮುದದಿ
ಅಳಿಯಗೊಪ್ಪಿಸೋ ನೀನು ॥ ೪ ॥

ಹಾಡಿದವರು : **ಶ್ರೀಮತಿ ಸೇತೂಬಾಯಿ ವಸಂತರಾವ್ ಮಿರ್ಜಿ**

# ಹೆಣ್ಣು ಒಪ್ಪಿಸುವ ಹಾಡು

ಮೋಹದ ಮಗಳೆ । ಮುದ್ದಿನ ಗಿಳಿಯೇ
ಹತ್ತು ತಿಂಗಳ ಹೊತ್ತು ಹಡದೇನ ।
ಹತ್ತು ತಿಂಗಳ ಹೊತ್ತು । ಹಡೆದು ಪುತ್ರಿಯೇ ನಿನ್ನ
ಅತ್ತಿ ಮನಿಯಾಗ್ಹ್ಯಾಂಗ ಕಳುಹಲೇ ॥ ೧ ॥

ಕಮಲದಂಥ ಕಣ್ಣು ಲಿಂಬೆಯ ಹಣ್ಣು ।
ಕೊಟ್ಟ ಮನೆಗೆ ಹೋಗುವ ಹೆಣ್ಣು
ಕೊಟ್ಟ ಮನೆಗೆ ಹೋಗುವ ಹೆಣ್ಣು । ನೀ ನನ್ನ
ಬಿಟ್ಟು ಹೋದರ ನಾನಿರಲಾರೆ ॥ ೨ ॥

ಬಾಳಿಯು ಗಿಡದಾಂಗೆ । ಬೆಳದಾಳ ನನ ಮಗಳು ।
ಬಾಳೀಕ ಈಗ ನಡದಾಳ
ಬಾಳೀಕ ಈಗ ನಡದಾಳ ನನ ಮಗಳು
ಕಣ್ಣಿಗೆ ಕಾಣದಾಗುವಳ ॥ ೩ ॥

ಮಗಳು ಮನೆಯ ಬಿಟ್ಟು । ಅಗಲಿ ಹೋದವ್ಯಾಗ
ನಗುವ ಕಣ್ಣಿಗೆ ನೀರು ಬಂದಾಂಗ
ನಗುವ ಕಣ್ಣಿಗೆ ನೀರು ಬಂದಾಂಗ ತಾಯಿಯು ।
ಸೊಗಸೆಲ್ಲ ಮನೆಬಿಟ್ಟು ಹೋದಾಂಗ ॥ ೪ ॥

ಹೆಣ್ಣು ಹುಟ್ಟಿದ ಮನಿ । ತಣ್ಣಗನ್ನುವ ಮಾತು ।
ಹೊಟ್ಯಾಗ ಬಿಸಿ ಬಿಸಿ ಅಂದಾಂಗ
ಹೊಟ್ಯಾಗ ಬಿಸಿ ಬಿಸಿ ಅಂದಾಗ ನವಕುವಳು ।
ಕೆಟ್ಟ ಮನೆಯ ಹಾದೀ ಹಿಡಿದಾಗ ॥ ೫ ॥



ಹೆಣ್ಣು ಹಡೆದ ಮುತ್ತೈದೆಯರು ಮಗಳಿಗೆ
ಪುಣ್ಯದ ಹರಕೆಯು ನೀಡಿರೆ ।
ಪುಣ್ಯದ ಹರಕೆಯು ನೀಡಿ ಕಳುಹಿರಿ ನನ್ನ ।
ಕಣ್ಣು ಮುಂದಾಡುವ ಅರಗಿಳಿಗೆ ॥ ೬ ॥

ಹಾಡಿದವರು : **ಶ್ರೀಮತಿ ಸೇತೂಬಾಯಿ ವಸಂತರಾವ್ ಮಿರ್ಜಿ**

## ಗಂಡಗಂಜಿ ಬದಕು ಮಾಡಮ್ಮ

ಗಂಡಗಂಜಿ ಬದಕ ಮಾಡಮ್ಮ ಮುತ್ತೈದೆತನ
ಕಳಕೊಬ್ಯಾಡ ತಿಳಕೋ ತಂಗ್ಯಮ್ಮ ॥ ಪ ॥

ಗಂಡಗಂಜಿ ಬದಕ ಮಾಡ ಕಂಡ ಪುರುಷರನ್ನು ಮೆಚ್ಚಬ್ಯಾಡಮ್ಮ
ಹಾಗಿ ಬಾಗಿ ನಡೆಯ ತಂಗಿ ದಿಂಡಿತನಕ ತಿರುಗಬ್ಯಾಡಮ್ಮ ॥ ೧ ॥

ಮೊದಲ ಮಾವರ ಮೋಹ ಬ್ಯಾಡಮ್ಮ ಮತ್ಯಾರು
ಮಂದಿ ಕೇರಿಯೊಳಗ ಸುಳಿಯಬ್ಯಾಡಮ್ಮ
ಹತ್ತು ಎಂಟು ಮಂದಿ ನಿನ್ನ ಸುತ್ತ ಮುತ್ತ ಕಾಯತಾರಮ್ಮ
ಗೊತ್ತು ತಪ್ಪಿ ಹೋದಮ್ಯಾಲ ಮುತ್ತಿಗೆ ಹಾಕಿ ಎಳಿಯತಾರಮ್ಮ ॥ ೨ ॥

ಊರ ದನಿಯರು ಮೂವರ ಇಹರಮ್ಮ
ಊರ ಹೊರ್ತ ಮಾನ ನಿತ್ಯ ನಿತ್ಯ ಬರೆಯತಾರಮ್ಮ
ತಪ್ಪು ಮಾಡಿದವರನ್ನ ಮತ್ತೆ ಪಾರಕ್ಕೆ ಕಳುತಾರಮ್ಮ
ಅತ್ತ ಇತ್ತ ತಿರುಗಬ್ಯಾಡ ಮುತ್ತು ಜತನ ಮಾಡ ಹಡದಮ್ಮ ॥ ೩ ॥

ಮನಿಯ ಬಿಟ್ಟು ತಿರುಗಬ್ಯಾಡಮ್ಮ ಮನೆಯ ಮುಂದಿನ
ಅಂಗಳ ಕಸವ ಹೊಡೆದು ಹಸನ ಮಾಡಮ್ಮ
ಅಂಗವೆಂಬ ಗಡಿಗ ತೊಳೆದು ಲಿಂಗ ದರ್ಶನ
ಅಡಿಗೆ ಮಾಡಿ ಮಂಗಲಾತ್ಮವು ವಲ್ಲಭಾಗ್ಯ
ಐಕ್ಯ ರೂಪವು ತೃಪ್ತಿ ಕಾಣಮ್ಮ ॥ ೪ ॥

ಮೇಲ ಮಾಲಿನ ಕೀಲಿ ತೆರೆಯಮ್ಮ ನೀಲಾದ ಜ್ಯೋತಿ
ಹಚ್ಚಿ ಸುತ್ತಲೂ ಬೆಳಕ ಕಾಣಮ್ಮ ಬಾಲಚಂದ್ರನಂತೆ
ಹೊಳೆಯುವ ಲೋಲ ಶ್ರೀ ಗುರು ಚೆನ್ನಬಸವ
ಕರ್ಮನೆಂಬ ನೀನು ತಿಳಿದು ಲೀಲದಲ್ಲಿ ಹಾಡ ಹಡದಮ್ಮ ॥ ೫ ॥

ಹಾಡಿದವರು : **ಶ್ರೀಮತಿ ಶಾಂತವ್ವ ಹರಿಜನ**



## ಮುತ್ತೈದೇರ ಆಶೀರ್ವಾದ

ಹರಸೀರಿ ನೀವೀಗ ಸರಸಿಜಾಕ್ಷಿಗೆ ಬೇಗ
ಹರಸೀರಿ ನೀವೀಗ ಹರುಷದಿಂದಲ್ಲೆ ಕೃಷ್ಣನ್ನ
ಹರದರಿಂದಾಡಿಸು ಹರಸೀರೆ ನೀವೀಗ ॥ ಪ ॥

ಗಂಧ ಕುಂಕುಮ ಪುಷ್ಪ ಚೆಂದದಲ್ಲಿಟ್ಟು ನೀವು
ಕಂದನ ಪಡೆದು ಸುಖ ಆನಂದದಿಂದ ಇರು ಎಂದು ॥ ೧ ॥

ಮುತ್ತು ಮಾಣಿಕ್ಯ ನಾವು ರತ್ನದಲ್ಲಿಟ್ಟು ನೀವು
ಮುತ್ತೈದೆತನ ಕೊಟ್ಟು ರಕ್ಷಿಸು ಎಂದೆನುತ
ಹರಸೀರಿ ನೀವೀಗ ॥ ೨ ॥

ಹರಿಹರಿ ಬಾಲೆಯರು ನೆರೆದು ಸ್ರಿಂಗರವಾಗಿ ರಘುಪತಿ
ಪಾಹಿಪ ರಘುಪತಿ ರಾಮನಿಗೆ ಹರಸೀರೆ ನೀವೀಗ
ಸರಸಿಜಾಕ್ಷಿಗೆ ಬೇಗ ॥ ೩ ॥

ಹಾಡಿದವರು : **ಶ್ರೀಮತಿ ಸೇತೂಬಾಯಿ ವಸಂತರಾವ್ ಮಿರ್ಜಿ**

## ಮದುವಿ ಅರಿಷಿಣ ಹಚ್ಚುವ ಹಾಡು

ಅರಿಷಿಣ ಹಚ್ಚಿರಿ ಸರಸಗನ್ನಿಕ್ಕಿಗೆ
ಸರಸೋತಿ ಹಡದ ಮಗಳಿಗೆ ಸೋಬಾನವ
ಸರಸೋತಿ ನೀ ಹಡದ ಮಗಳ ತಂಗ್ಯಮ್ಮಗ
ಅರಿಷಿಣ ಹಚ್ಚಿರಿ ಶೋಭೆಯಿಂದ ಸೋಬಾನವ

ಗಂಧ ಹಚ್ಚಿರಿ ನನ್ನ ಇಂದ್ರ ಗನ್ನಕ್ಕಿಗೆ ಗಂಗವ್ವ
ಹಡದ ಮಗಳಿಗೆ ಸೋಬಾನವ

ಕುಂಕುಮ ಹಚ್ಚಿರ ಕೂಸಗನ್ನಿಕ್ಕಿಗೆ
ಕುತುತಿ ಹಡದ ಮಗಳಿಗೆ ಸೋಬಾನವ

ಹಂಪಿ ಜಾತರಿಗ್ಹೋಗಿ ಸೂಸನ ಗಂಗನ
ಮುಂದ ಸಂಪಿಗಿ ಹೂವ ಶಿವಪೂಜೆ
ಸೋಬಾನವ ॥

ಹಾಡಿದವರು : **ಶ್ರೀಮತಿ ಬಸಮ್ಮ ಹಾಗೂ ಪಾರ್ವತವ್ವ**



## ಸಂಕೀರ್ಣ ಪದಗಳು

ಹಾವ ಅಂದರ ಹರನೆಲ್ಲ ನಡಿಗ್ಯಾವ
ಹಾವಲ್ಲ ಹಂಪಿ ವಿರುಪಾಕ್ಷ
ಹಾವು ಅಲ್ಲ ಹಂಪಿ ವಿರುಪಾಕ್ಷ
ಗುಡಿ ಮುಂದೆ ನಮ್ಮ ಅಣ್ಣ ಸರದಾರ
ಹಾವಾಗಿ ಗಂಗವ್ವ ಹರಿದಾಳ ॥ ೫ ॥

ಹಾಡಿದವರು : **ಬಸಮ್ಮ ಕಲ್ಲಪ್ಪ ಶಿವಳ್ಳಿ, ಮುತ್ತಗಿ**



## ಗೋದಿಕಲ್ಲಿನ ಪದ (ಬೀಸುಕಲ್ಲಿನ ಪದ)

ಪಾದರುದ್ರಾಕ್ಷಿದರಸ ವಾಲಿಕಾರನ್ನ ಕರಸ
ಮುತ್ತಿಗಿ ಹಿರಿಯರಿಗೆ ತಿಳಸ
ನಾಯೀನಂದಿನಿ, ಸತಿ ಪುರುಷ ತಾಯಿ ತಂದಿನ್ನ ಕರಸ ॥ ೧ ॥

ವಿಠ್ಠಲಗೋಗ್ಹುದು ಇಟ್ಟೇನೆ ಮನದಾಗ
ಹೊಟ್ಟಿ ಉಡುದಾರನ ಮಗನ
ಹೊಟ್ಟಿ ಉಡುದಾರನ ಮಗನ ಎತಿಗೊಂಡು
ವಿಠ್ಠಲಗ್ಹೋಗಿ ಬರುವೆನು ॥ ೨ ॥

ಮಲ್ಲೀಗ್ಹೂವಿನದಂಡಿ ಮ್ಯಾಲ ತೀರತ ಗಿಂಡಿ
ಈಗರ ಎಲ್ಲಮ್ಮಗ ಕಳಿವ್ಯಾರ
ಈಗ್ಯಾರ ಎಲ್ಲಮ್ಮಗ ಕಳಿವ್ಯಾರ ಗೊಡಜಿಯ
ತಂಗಿಗೆ ಈರಣ್ಣ ಕಳಿವ್ಯಾನ ॥ ೩ ॥

ಕಂಚಿನ ಕಾರಡಗಿ ಮಿಂಚೂದು ಬೂದನಗುಡ್ಡ
ಗೊಂಚಲದ ಮುತ್ತ ಉಳವಿ ಬಸವಣ್ಣನ
ತೇರ ತಂಪೂತಿನ್ಯಾಗ ಎಳದಾರ ॥ ೪ ॥

ಆಗುವ ಮುಕ್ಕಿಗೆ ಯಾರನ್ನ ಹಾಡಲಿ
ಭೂಮಿಯ ಆಳುವ ಬಸವಣ್ಣ
ಭೂಮಿಯ ಆಳುವ ಬಸವಣ್ಣನ ಹಾಡಿದರ ನೀಲಮ್ಮನ
ಹಾಡಿಗೆ ಮುಗಿಸೆನೆ ॥ ೫ ॥

ಹಾಡಿದವರು : **ಬಸಮ್ಮ ಕಲ್ಲಪ್ಪ ಶಿವಳ್ಳಿ, ಮುತ್ತಗಿ**

# ಕೋಲು ಪದ

ಕೋಲು ಕೋಲೆ ಕೋಲು ಕೋಲನ್ನೆ ಕೋಲೆ
ಸುವನಾರಿ ಕಮಲೆ ಸುರುಹೊನ್ನ ಕೋಲೆ ॥ ಪ ॥

ಹೊತ್ನಂತೆ ಎದ್ದು ಯಾರ್‍ಯಾರ ನೆನೆಯಲಿ
ಕಲ್ಲು ಕಾವೇರಿ ಕಪನೀಯ ಕೋಲೆ
ಕಲ್ಲು ಕಾವೇರಿ ಕಪ್ನಿಯ ಬಸವಣ್ಣ
ಹೊತ್ನಂತೆ ಎದ್ದು ನೆನದೇವು ಕೋಲೆ ॥ ೧ ॥

ಹತ್ತು ಸಾವಿರ ಪದವ ಎತ್ತಿನ್ಮೇಲ್ಹೇರಕೊಂಡು
ಮತ್ತೆ ಸಾವಿರ ಕೈಲಿ ಹಿಡಕೊಂಡು ಕೋಲೆ
ಎಂಟು ಸಾವಿರ ಪದವ ಒಂಟೆ ಮೇಲ್ಹೇರಕೊಂಡು
ಎಂಟೂರು ಸುತ್ತಿ ಬರತೀನಿ ಕೋಲೆ ॥ ೨ ॥

ಆರು ಸಾವಿರ ಪದವ ಹೋರಿ ಮೇಲ್ಹೇರಕೊಂಡು
ಬಸವಣ್ಣ ಸಭೆಗೆ ಬಂದಿವ್ನಿ ಕೋಲೆ
ಕೋಲಿನ್ಮೇಲುಬ್ಬಿ ಬಸವಣ್ಣ ಕೂತ್ಕೊಂಡು
ಲಾಲಿಸಿ ಪದವ ಬರಕೊಂಡ ಕೋಲೆ ॥ ೩ ॥

ಅವರಾಡಿ ಇವರಾಡಿ ತೂಳಾಡಿ ಭುಜಮಡಿ
ನಾಗರ ಹೆಡೆಯಂತೆ ನಡುವಾಡಿ ಕೋಲೆ
ನಾಗರ ಹೆಡೆಯಂತೆ ನಡುವಾಡಿ ಕೋಲೆ
ನಮ್ಮುಟ್ಟಿ ನೀನಾಡಿ ದಣಿದೆಲ್ಲೊ ಕೋಲೆ ॥ ೪ ॥

ಹಣ್ಣಾಯಿ ಹೆಡ್ಗಿ ಹೆಗಲ್ಲಿ ಹೊತ್ಕೊಂಡು
ಮತ್ತೆ ರಾತ್ರೀಗೆ ಬರುತೀವಿ ಕೋಲೆ
ಕೋಲು ಬಿಡ್ತಾರೆಂದು ಸಿಟ್ಟು ಮಾಡಲಿಬೇಡ
ನಿನ್ನಾಣೆ ಕೋಲು ಬಿಡತೀವಿ ಕೋಲೆ ॥ ೫ ॥

ಹಾಡಿದವರು : **ಪಾರ್ವತವ್ವ ಹೊಸಮನಿ**



# ಶೀಗಿ ಹುಣ್ಣಿಮೆ ಹಾಡು

ಶೀಗೆ ಹುಣ್ಣಿಮೆ ದಿನ ಉಣಲಿಕ್ಕೆ ಕರೆಯಾವರೇನಲ್ಲಾ
ಕರೆದರೆ ಹೋಗದ ಬಿಡಲಿಲ್ಲಾ ॥ ಪ ॥

ಹುರಿಯಕ್ಕಿ ಹೋಳಿಗೆ ಹೂರಣಗಡಬು
ಕಡಲಿಬೆಳ್ಳಡಿ ಕಟ್ಟಿನಾಂಬರ
ಉಂಡಿಗಡಬು ಪುಂಡಿಯ ಪಲ್ಲೆ ಬುಟ್ಟಿಯೊಳಿಟ್ಟಿಲ್ಲ
ಬುಟ್ಟಿಗೆ ಕೆಮ್ಮಣ್ಣು ಬಡಿದೆಲ್ಲ
ಅದರ ಅನುಭವ ತಿಳಿಯಲಿಲ್ಲ ॥ ೧ ॥

ಇಂದು ಅಂದು ಬಂದು ಬಹುದಿನ ಹೊಲದೊಳು ಕುಂತೆಲ್ಲಾ
ಮನಸಿನ ಬೈಲಿಗೆ ತಿಳಿಲಿಲ್ಲ
ಗಂಧದ ಬಟ್ಟಿ ಗವುಶಿಲೆ ಇಟ್ಟು ಹಂಗನೊಲ ಹಾಕಿ ಎಷ್ಟು
ಬಟ್ಟಿನ ಕಲ್ಲಿಗೆ ಸುಣ್ಣಾ ತೊಟ್ಟ ಕಣ್ಣಲಿ ಕಂಡೆಲ್ಲಾ
ಆ ಕಲ್ಲೇನುಣಲಿಲ್ಲ । ಎಡಿಮಾಡಿ ನೀನೇ ಉಂಡೆಲ್ಲಾ ॥ ೨ ॥

ಮಂಗಳಾತ್ಮ ಶಿಶುನಾಳಧೀಶನಲೆ
ಬಲ್ಲವರು ನೀವೆಲ್ಲ ಕೂಡಿರಲ್ಲೆ
ಶೃಂಗಾರ ನಾರೇರೆಲ್ಲಾ ರಂಗಿನಿಂದ ಕೋಲು ಪಿಡಿದು
ಯೋಗದಿಂದ ತ್ಯಾಗಮಾಡಿ ರಾಗದಲ್ಲೆ
ಶಿವಶರಣರಲ್ಲೆ ಶೀಗಿ ಕರೆದಾರಲ್ಲೆ ॥ ೩ ॥

ಹಾಡಿದವರು : **ಚೆನ್ನವ್ವ ಹರಿಜನ ಮುತ್ತಗಿ**

## ತೊಟ್ಟಿಲ ಹಾಡು

ಜೋ ಜೋ ನಂದನ ಜೋ ಜೋ ॥ ಪ ॥

ನಂದನ ಜೋ । ಕಂದನ ಜೋ
ಪ್ರೀತಿ ಬಂಧನ ಜೋ ॥ ಅ. ಪ ॥

ಶೋಭಾ ಸುಂದರ ಜೋ । ಲೀಲಾ ಮಂದಿರ ಜೋ
ಮೋಹನ ಜೋ ಮೋದನ ಜೋ
ಕಾಂತಿ ಚಂದಿರ ಜೋ ॥ ೧ ॥

ಅರಳು ಮಲ್ಲಿಗಿ ಜೋ ಬಿರಿದ ಕೇತಕಿ ಜೋ
ರನ್ನನೆ ಜೋ ಚೆನ್ನನೆ ಜೋ
ಮುದ್ದು ಮೋಹನ ಜೋ ॥ ೨ ॥

ಶಾಂತಿ ಸಾಗರ ಜೋ । ಕಾಂತಿ ಭಾಸುರ ಜೋ
ಭೂವರ ಜೋ ಶ್ರೀವರ ಜೋ
ಮಂದಹಾಸನೆ ಜೋ ॥ ೩ ॥

ಹಾಡಿದವರು : **ಶ್ರೀಮತಿ ಬಸಮ್ಮ ಶಿವಳ್ಳಿ ಹಾಗೂ ಪಾರ್ವತಮ್ಮ ಹೊಸಮನಿ**



## ಲಿಂಬೆಹಣ್ಣು

ಬಣ್ಣದಿ ರೂಪದಿ ರಸದಲಿ ಗುಣದಲಿ
ಲಿಂಬೆಯ ಹಣ್ಣೇ ಬಹಳಾಗಿ
ದಿನವೂ ಎಲ್ಲರ ಕಣ್ಮನ ತಣಿಸುತ
ಮೆರೆಯುತಲಿರುವದು ಸೊಗಸಾಗಿ ॥ ಪ ॥

ದೀಪಕ ಪಾಚಕ ವಾತ ವಿನಾಶಕ
ಶೂಲಿ ವಿನಾಶಕ ಲಿಂಬೆರಸ
ಬಹು ವಿಧವಾಗಿಹ ತಿನಿಸು – ಪೇಯದಲಿ
ಬೆರೆಯುವದಾದರೆ ಬಲು ಸರಸ ॥ ೧ ॥

ಜ್ವರವಿರೆ ಬ್ಯೆಯ್ಯಲಿ ಬಿಸಿ ಬಿಸಿ ನೀರಲಿ
ಲಿಂಬೆಯ ರಸವನು ಹಿಂಡುತಲಿ
ಸಕ್ಕರೆ ಕೂಡಿಸಿ ಕುಡಿಯುವದಾದರೆ
ಬಿಡುವದು ಜ್ವರವದು ಬೇಗದಲಿ ॥ ೨ ॥

ಪಾನಕದಲಿ ಈ ಲಿಂಬೆಯ ಹಣ್ಣಿನ
ಪಾನಕವೇ ರುಚಿಯಾಗಿಹುದು
ಅದರಲಿ ಬೇಸಗೆ ಕಾಲದಲಂತೂ
ಹೆಚ್ಚಿನ ರುಚಿಯನು ಕೊಡುತಿಹುದು ॥ ೩ ॥

ಇಂತಾ ಬಹುಬಗೆ ಗುಣದ ಲಿಂಬೆಯು
ಅಮೃತದ ಸರಿಸಮವಾಗಿಹುದು
ಅಂತೆಯೆ ಸಂತತ ಕಾಲದಿ ಲಿಂಬೆಯು
ಎಲ್ಲರ ಮನೆಯಲಿ ಸುಳಿಯುವುದು ॥ ೪ ॥

ಹಾಡಿದವರು : **ದ್ಯಾವಕ್ಕ ತುಳಜಮ್ಮನವರ ಸುಳ್ಳ**

## ಒಕ್ಕಲುತನದ ಪದ

ಅಟ್ಟದ ಮ್ಯಾಗಿನ ಕೂರಿಗಿ ಇಳವಿ ಪೂಜಿ ಮಾಡಿರೆ
ತೊಳಲ ಕಟ್ಟಿ ಕಾಯ ಒಡೆದು ಪೂಜಿ ಮಾಡಿರೆ ಪುಣ್ಯ ಪಡಿರೆ
ಇಂಥಾ ಬರವ ಸಿಗಾಕಿಲ್ಲ ಬಿತ್ತಗಿ ಬೇಗ ಮಾಡಿರೆ || ಪ ||

ನಾಕು ತಾಳ ಒಂದು ಮೇಳ ಐದು ಕೂಡಿ
ಹಸಿ ಹಕ್ಕಾಲದಾಗ ನೀವು ಬೀಜ ಬಿಡರೆ
ಇಂಥಾಬರವ ಸಿಗಾಕಿಲ್ಲ ಬಿತ್ತಗಿ ದೌಡ ಮಾಡಿರೆ || ೧ ||

ಸೋಮ ಭೀಮ ಅನ್ನೂ ಎರಡೂ ಎತ್ತಿನ್ಹೂಡಿ
ಮುತ್ತಿನ್ಹಗ್ಗ ಮುಗದಾಣಾ ಮುಂದ ಮಾಡಿ
ಇಂಥಾ ಬರವ ಸಿಗಾಕಿಲ್ಲ ಬಿತ್ತಗಿ ದೌಡ ಮಾಡಿರೆ || ೨ ||

ಬಿತ್ತಿ ಬಿತ್ತಿ ನೀವೆಲ್ಲ ದಣಕೊಂಡಿರೇ
ದಣಕೊಂಡಿರೆ ನೀವು ಮುಂದೆಲ್ಲ ಫಲ ಕಂಡಿರೆ
ಇಂಥಾ ಬರವ ಸಿಗಾಕಿಲ್ಲ ಬಿತ್ತಗಿ ದೌಡ ಮಾಡಿರೆ || ೩ ||

ಫಲ ಹುಟ್ಟೈತ್ತೆಪ್ಪ ಬಾಳು ಬಲು ಭಾಗ್ಯ
ಮೂರ್ತ ನೋಡಿ ಕೊಯಿಸಿರೆಪ್ಪ ಲಗುಬಗೆ ಮಾಡಿ
ಇಂಥಾ ಬರವ ಸಿಗಾಕಿಲ್ಲ || ೪ ||

ಬಣವಿ ಹಾಕಿ ತುಳಿಸಿರೆಪ್ಪ ದೌಡ ಮಾಡಿ
ಗಾಳಿ ಬಿಟ್ಟಾಗ ಕೈಯ್ಯಾಗ ಹಿಡಿದು ರಾಶಿ ಮಾಡಿರಿ || ೫ ||

ಹಣ್ಣು ಕಾಯಿ ತಂದು ನೀವು ಎಡಿಯ ಮಾಡಿರೆ
ಮುಹೂರ್ತ ನೋಡಿ ತುಂಬರೆಪ್ಪಾ ಭಂಡಿ ನೀವು || ೬ ||

ಹಾಡಿದವರು : **ಶ್ರೀಮತಿ ಶಾರದಾಬಾಯಿ ನಾಗರಾಜ ಉಪ್ಪಾರ**



## ಹರಿಶ್ಚಂದ್ರ

ನೀರು ಇಲ್ಲದವರಿಗೆ ನೀರು ದಾನ ಮಾಡತಾರ
ಅನ್ನ ಇಲ್ಲದವರಿಗೆ ಅನ್ನ ದಾನ ಮಾಡತಾರ
ವಸ್ತ್ರ ಇಲ್ಲದವರಿಗೆ ವಸ್ತ್ರ ದಾನ ಮಾಡತಾರ
ಸತ್ಯ ಉಳ್ಳ ಹರಿಶ್ಚಂದ್ರ ಇಷ್ಟೆಲ್ಲ ದಾನ ಮಾಡತೀದಿ
ಇಷ್ಟೆಲ್ಲಾ ಮಾಡತಿದಿ ಹಿಂದಿನ ಸಾಲಾ ತೀರಸಿದಿ
ಕೋಲು ಕೋಲೆನ್ನೆ ಕೋಲೆ || ೧ ||

ವಿಶ್ವಾಮಿತ್ರ ಸ್ವಾಮಿಗಳ ಹಿಂದಿನ ಸಾಲ ತೀರಸ್ತೇನಿ
ಆರ ಸಾವಿರ ಹಣವ ತೊಗೊಂಡು
ಸೆರಗಿಲೆ ಸೆಲ್ಲೆನ ಕಟ್ಟಿಕೊಂಡು ಕೋಲು ಕೋಲೆನ್ನೆ ಕೋಲೆ
ಸೆರಗಿಲೆ ಸೆಲ್ಲೆನ ಕಟ್ಟಿಕೊಂಡು ವಿಶ್ವಾಮಿತ್ರ ಸ್ವಾಮಿಗಳ
ವಿಶ್ವಾಮಿತ್ರ ಸ್ವಾಮಿಗಳ ಸಾಲ ತೀರಸಲಿ ಬಂದೆ
ಬಂದ ಮುಟ್ಟಿದೆ ನೀ ನಿಮ್ಮ ಸಾಲ
ಸತ್ಯಉಳ್ಳ ಹರಿಶ್ಚಂದ್ರ ಮುಟ್ಟಲಿಲ್ಲ ನಮ್ಮ ಸಾಲ || ೨ ||

ಮನಿಗಾರ ಬಂದಾನ ತಾರಾಮತಿ ಕೊರಳಾನ ದಾಗಿನ ಕಸಗೊಂಡು
ದಾಗಿನ ಕಸಗೊಂಡು ಮಾರಾಟಕ್ಕ ಹಚ್ಯಾನ ಆರು ಸಾವಿರ ಹಣವ ಕೊಡಿರಿ
ಆರು ಸಾವಿರ ಹಣವ ತೊಗೊಂಡು ಶೆಲ್ಲೆದ ಸೆರಗಿಲೆ ಕಟ್ಟೆ
ವಿಶ್ವಾಮಿತ್ರ ಸ್ವಾಮಿಗಳ ಸಾಲಾ ತೀರಿಸಲಿ ಬಂದೆ || ೩ ||

ಆನಿ ಆನಿಯ ಸಾಲ ಆನಿ ಒಂಟೆಯ ಸಾಲ
ಆನಿ ಒಂಟೆಯ ಸಾಲ ಮಾರಾಟಕ್ಕ ಹಚ್ಯಾರ
ಮಾರಾಟಕ್ಕ ಹಚ್ಯಾರ ಆರು ಸಾವಿರ ಹಣವ ಕೊಡಿರಿ

ಆರು ಸಾವಿರ ಹಣವ ತೊಗೊಂಡು ಶೆಲ್ಯೆದ ಸೆರಗಿಲೆ ಕಟ್ಟಿಕೊಂಡು
ಶೆಲ್ಲೆದ ಸೆರಗಿಲೆ ಕಟ್ಟಿಕೊಂಡು ವಿಶ್ವಾಮಿತ್ರ ಸ್ವಾಮಿಗಳ
ವಿಶ್ವಾಮಿತ್ರ ಸ್ವಾಮಿಗಳ ಸಾಲಾ ತೀರಸಲಿ ಬಂದೆ
ಸತ್ಯಉಳ್ಳ ಹರಿಶ್ಚಂದ್ರ ಮುಟ್ಟಲಿಲ್ಲಾ ನಮ್ಮ ಸಾಲಾ || ೪ ||

ಹಾಡಿದವರು : **ಶ್ರೀಮತಿ ಶಾರದಾಬಾಯಿ ನಾಗರಾಜ ಉಪ್ಪಾರ**



## ಕಿತ್ತೂರ ಚೆನ್ನಮ್ಮ

ಕಿತ್ತೂರ ಚೆನ್ನಮ್ಮ ಶೌರ್ಯಕ್ಕ ಇನ್ಯಾರ ಆಗಿಲ್ಲಾ
ಸಂಸಾರಿಕರೊಳಗೆ ಹೆಸರನ್ನ ಯಾರ ಉಳಿಸಿಲ್ಲ
ಕೆಂಪ ಮಾರಿ ಇಂಗ್ಲೀಷ ಭಾರತ ಅರಸರಿಗೆಲ್ಲ
ಕಪ್ಪ ಕೊಟ್ಟ ರಾಜ್ಯ ಅವರಿಗೆ ಒಪ್ಪಿಸಿದರೆಲ್ಲ । ಕಿತ್ತೂರಿನ
ಸಂಸ್ಥಾನರ ಮನೆ ಹೊಕ್ಕಾರ ಮೇಲ । ರಾಜಧಾನಿ
ಮೇಲ ಹಕ್ಕ ನಿಮ್ಮದೇನಿಲ್ಲ । ಅಲ್ಲವಾದರ ನಿಮ್ಮನೀಗ
ಬಿಟ್ಟ ಹೋಗಾವರಲ್ಲ

ಚೆನ್ನಮಂತಾಳ ಬಾಯಿ ಮಾತ
ಇನ್ನ ಬೇಕಿಲ್ಲ ರೊಟ್ಟಿಗೆದ್ದ ಚೆನ್ನಮ್ಮಾ ಚಪ್ಪಲಿ ಇಂಗ್ಲೀಷರಿಗೆಲ್ಲ
ಕನ್ನಡಿಗರ ಮಂಗ್ಯಾ ನೋಡಿರಿ ಇನ್ಮ್ಯಾಲೆ। ಕೈಯಲ್ಲಿದ್ದ
ಹತಿಯರ ಹಿಡಿದ ಕೈ ಎತ್ತಿ ಮೇಲೆ ನಿಮ್ಮನ ಉಳದ
ಕೊಳ್ಳುವರು ಇನ್ಯಾರಿಲ್ಲಿ ದುಷ್ಟ ಥ್ಯಾಕರೆ ಸಾಹೇಬ ಕರಕರ
ಕಡಿದಾನ ಹಲ್ಲ । ಮದ್ದ ಗುಂಡು ತೋಪಿನಿಂದ
ಸುಡಕೆವಿದನೆಲ್ಲ । ತಿರುಕ ಹರಕರಂತೆ ಬಿಕ್ಕಿ
ಬೇಡಬಂದಿಲ್ಲ । ಚೆನ್ನಮಂತಾಳ ಬಾಯಿ ಮಾತು
ನಮಗಿನ್ನ ಬೇಕಿಲ್ಲ । ರುದ್ರಾವತಾರಿ ಭದ್ರತ ಕಾಳಿ
ಶಬರಿಗೆ ಶಾಂತಿಲ್ಲ।

ಶೂರಧೀರ ಗಂಭೀರರೆಂದು ತಿರಕೊಂಬುವರಲ್ಲ
ದುಷ್ಟ ದುಮ್ಮಾನರಿಗೆ ಮೆಟ್ಟು ಸಿಟ್ಟು ಸುಳ್ಳಲ್ಲ ಬುದ್ಧಿಗೇಡಿ
ಥ್ಯಾಕರೆನ ಯುದ್ಧಕೆ ನಿಂತ ತಾತ್ಕಾಲ
ಚೆನ್ನಮ್ಮನ ಹೊಡತಕ ಥ್ಯಾಕರೆನ ಚೆಂಡು ಹಾರಿಹೋಯಿತಲ್ಲ
ಬ್ರಿಟಿಶರಿಗೆ ಜಾಹಿರಾತು ಮಾಡಿಕೊಂಡಿಲ್ಲ ಥ್ಯಾಕರೆ ಸಾಹೇಬನ
ವಾರ್ತೆಯು ಆಂಗ್ಲರ ಮುಟ್ಟಿತ ತಪ್ಪಿಲ್ಲಾ
ಮದ್ದುಗುಂಡು ತೋಪುಸೇನೆ ಅರ್ಭಾಟ ಕಳತಿಲ್ಲ

ಕಿತ್ತೂರಿನ ಊರ ಸುತ್ತ ನಿಂತ ನೂಭೈಲ ಸುತ್ತ
ಹೆಣದ ರಾಶಿ ಬಿದ್ದಿತು ಸುತ್ತಮುತ್ತೆಲ್ಲ ।   ಚೆನ್ನಮ್ಮ ರಾಣಿ
ಸೋತಳೆಂದು ಸುದ್ದಿ ನಡುವಳು
ಕರೆ ಹೆಂಡತಿಗೆ ಮಲ್ಲಸರ್ಜನ ಮುಂಗಲೈತಿ ಮೊದಲ
ಧರೆಯೊಳು ವಾಸುದೇವ ಜೋಡಳ್ಳಿ ಪ್ರಭುಲಿಂಗ

ಹಾಡಿದವರು : ಮಹದೇವಪ್ಪ ಜೋಡಳ್ಳಿ



## ಸಿಂಧೂರ ಲಕ್ಷ್ಮಣ ಪದ

ಆ ಊರ ಬಿಟ್ಟ್ಯಾನ ಈ ಊರ ಬಿಟ್ಟ್ಯಾನ
ಪೆಟ್ಟಿ ಮಾಡ್ಯಾನ ಗಡಿ ತೆಗ್ಗಿ ಕೋಲ
ಪೆಟ್ಟಿ ಸೀ ಮಾಡ್ಯಾನ ಗಡಿ ತೆಗ್ಗಿ ಲಚಮಣ್ಣ
ಊಟಕ್ಕ ಹೇಳ್ಯಾರ ಗೌಡರ ಕೋಲ

ಊಟಕ್ಕ ಹೇಳ್ಯಾರ ಘಾತಕದ ಗೌಡರ
ಬಂದೂಕು ತುಂಬ್ಯಾರ ಬಲಿಪೂರ ಕೋಲ
ಗಂಭೀರದ ಚಲವು ಅಳದಾರ ಕೋಲ
ಬಿದ್ಯಾನ ಬಿದ್ಯಾನ ಬಿಳಿ ಅಂಗಿ ಮೇಲಾಗಿ
ರುದ್ರ ಜೋಡಂಗಿ ರಗತಾವ ಕೋಲ

ಯಾಳೆವು ಯಾಳೆವಕ ಬಾಯಿ ಬಿಡತಾನ ಕೋಲ
ಯಾಳೆವು ಯಾಳೆವಕ ಬಾಯಿ ಬಿಡತಾನ ಲಚಮಣ್ಣ ಕೋಲ
ಅಂಗಳ ಕೊರಳ ಅಳತಾಳ ಕೋಲ

ತಪ್ಪಿಮ್ಯಾಲಿನ ಹುಲ್ಲ ಗಾಳಿಗೆ ಹಾರುವಂಗ
ಹೊತ್ತೊತ್ತಿಗೆ ಬಾಯಿ ಬಿಡತಾನ ಕೋಲ
ಹತ್ತು ಮಂದಿಯುವನ ಗೆಳೆಯರ ಲಚಮಣ್ಣ
ಹೊತ್ತು ಬಂದಾಗ ಯಾರಿಲ್ಲ ಕೋಲ

ಬಾಳಿ ಹಣ್ಣಿನಂಗ ಬಾಗಿ ಪವಾಡವ ಸುತ್ತಿ ಲಚಮಣ್ಣ
ಬಾಳ ಮಂದೆವನ ಗೆಳೆಯರ ಕೋಲ
ಬಾಳ ಮಂದೆವನ ಗೆಳೆಯರ ಲಚಮಣ್ಣ
(ರೇಳವು) ಯಾಳೇವು ಬಂದಾಗ ಯಾರಿಲ್ಲ ಕೋಲ

ಅತ್ತಿ ಹಣ್ಣಿನಂಗ ಹತ್ತಿ ಪವಾಡವ ಸುತ್ತಿ
ಹತ್ತು ಮಂದೆವನ ಗೆಳೆಯರ ಕೋಲ
ಹತ್ತು ಮಂದೆವನ ಗೆಳೆಯರ ಲಚಮಣ್ಣ
ಹೊತ್ತು ಬಂದಾಗ ಯಾರಿಲ್ಲ ಕೋಲ

ಹಾಡಿದವರು : **ಮಹದೇವಪ್ಪ ( ಜೋಡಳ್ಳಿಮಾಸ್ತರ)**



## ಹೊಳಿ ಗಂಗವ್ವನ ಹಾಡು

(ಪತಿವ್ರತೆಯರ ಬಗೆಗೆ)

ಹೊಳಿ ಬಂತ ಹೊಳಿ ಬಂತ ರನ್ನದ ಹೊಳಿ ಬಂತ
ಮ್ಯಾಲಿ ತೆಪ್ಪದ ಹೊಳಿಬಂತ । ಶೋಭಾನವ
ಮ್ಯಾಲ ನೀ ತೆಪ್ಪದ ಹೊಳಿಬಂತ ಗಂಗವ್ವ ತಾಯಿ ।
ಡಮಕಾಶಿ ಊರ ಹೊಗತಾಳ । ಶೋಭಾನವ ॥ ೧ ॥

ಗೌಡರ ಕುಲಕರ್ಣಿ ಬಡಗಿ ಜಾವದಾರ ।
ಗಗನಾಪತಿ ಎಂಬುವ ರೈತರ ಶೋಭಾನವ
ಗಗನಾಪತಿ ಎಂಬ ರೈತರ ರಾಣಿಯರ ಕೂಡಿ ।
ಓಣ್ಯಾಣಿಗೆ ಕೇಳುತ ಬರತಾರ ಶೋಭಾನವ ॥ ೨ ॥

ಮುಣ್ಣ ಗುಂಪಿ ಮಾಡಿ ಬಣ್ಣದ ಒನಕಿಲೆ
ನಲಿನಲಿದಾಡಿ ಕುಟ್ಟುತಾಡುವಳ । ಶೋಭಾನವ
ಓಣ್ಯಾಗ ಆಡುವ ಮಗಳ ಓಡಿ ಒಳಿಯಾಕ ಬಂದ
ನಮ್ಮವ್ವ ಆದಾಳಿ್ರ ಪತಿವ್ರತಾ । ಶೋಭಾನವ ॥ ೩ ॥

ಹೊಟ್ಟಿಲೆ ಹುಟ್ಟಿದ್ದು ವೈರಿ ಬೆನ್ನಿಲೆ ಬಿದ್ದದ್ದು ವೈರಿ
ಮಗಳ ಶಾಲಕ್ಕ ನನಗ ವೈರಿ । ಶೋಭಾನವ
ಮಗಳ ನೀ ಶಾಲಕ್ಕ ನನಗ ವೈರಿ । ಶೋಭಾನವ ॥ ೪ ॥

ದೇವರ ಕೋಣ್ಯಾಗ ಪೂಜೆ ಮಾಡು ಮಾವಯ್ಯಾ
ಗಂಗವ್ವನಳದ ಬರಹೇನಿ । ಶೋಭಾನವ
ಹೋಗ್ಯಾರ ಹೋಗವ್ವ ಬೇಗನೆ ಬಾರವ್ವ
ಗಂಗವ್ವ ನಳದ ಬರಹೋಗ । ಶೋಭಾನವ ॥ ೫ ॥

ಅಡಗಿ ಮನ್ಯಾಗ ಮಜ್ಜಿಗಿ ಮಾಡು ಅತ್ತೆವ್ವ ।
ಗಂಗವ್ವ ನಳದ ಬರತೇನ್ರಿ । ಶೋಭಾನವ
ಹೋಗ್ಯಾರ ಹೋಗವ್ವ ಬೇಗನೆ ಬಾರವ್ವ ।
ಗಂಗವ್ವ ನಳದ ಬರಹೋಗ । ಶೋಭಾನವ || ೬ ||

ಹಾಡಿದವರು : **ದೇವಕ್ಕ ತುಳಜವ್ವ ಸುಳ್ಳ**



## ಯಾವದು ಬಲು ಪಾಡು

ದೇಹದೊಳು ಯಾವದು ಬಲು ಪಾಡು
ಮಹಾಂತಾ ಜ್ಞಾನದಿಂದ ನೋಡು || ಪ ||

ಹುಟ್ಟುವಾಗ ತಾಯಿ ತಂದಿ ಯಾವ ಗುರುತು ಹಿಡಿದು
ಬಂದಿ ನಾಳೆ ಬಿಟ್ಟು ಹೋದೆನಂತಿ
ಮಡದಿ ಮಕ್ಕಳ ಮೋಹವು ಭಾಳ
ದುಡಿದು ದುಡಿದು ನೀ ಅಧಿಲ್ಲೊ ಮೂಳಾ || ೧ ||

ಸರ್ವರೂಪ ಶಾಂತಿ ನಿನಗ ಹತ್ಯತವ್ವ ಒಣ ಭ್ರಾಂತಿ
ಮಾಡು ಗುರುಪಾದದ ಚಿಂತಿ ಸಂಸಾರೆಂಬುದು ಸುಳ್ಳಿನ ಸಂತಿ
ಗುರುವಿನ ಮರತೆಲ್ಲೊ ಗುಣಗೇಡಿ || ೨ ||

ಮೂರು ಲೋಕದಲ್ಲಿ ನೀನು ಹೋಗುದು ಯಾವಲ್ಲಿ
ಇದರ ನಾದಾವ ತಿಳಿವಲ್ಲಿ ಏರಿ ನೋಡು
ಕೈಲಾಸ ದ್ವಾರಾ ಗುರುಸಿದ್ಧೇಶ್ವರ ಕಾಣುವನಲ್ಲಿ || ೩ ||

ಹಾಡಿದವರು : **ದುರ್ಗವ್ವಾ ವಿ. ನಡಿಗೇರಿ**

## ಜೋ ಜೋ ಬಸವೇಶಾ

ಬಸವೇಶ್ವರ ಜೋಗುಳ
ಜೋ ಜೋ ಜೋ ಜೋ ॥ ಪ ॥

ಭುವನ ಪಾವನ ಬಸವ ಜೋ ।
ಶಿವನ ವಾಹನ ಬಸವ ಜೋ ।
ಕವಿದ ಕತ್ತಲೆಯು ಬಂದ
ರವಿಯೋ ಜೋ । ಭವಿಯೋ ಜೋ ॥ ಅ. ಪ ॥

ಗಳಿಯೋ ತುಂಬಿದ ಹೊನ್ನಿನ ಹೊಳೆಯು ಜೋ ।
ಬೆಳೆಯು ಹೊನ್ನಿನ ಮಳೆಯು ಜೋ ।
ಮಗುವೆ ಜೋ । ಸೂಗಾವೆ ಜೋ ನಗುವೆ ಜೋ ॥ ೧ ॥

ನಂದ ನಂದೀವರವೇ ಜೋ ಮಂದನಗೆಯ
ಮದುವೆ ಜೋ ।
ಚೆಂದ ಜೋ । ಚೆಲುವೆ ಜೋ ನಲುವೆ ಜೋ ॥ ೨ ॥

ಇಳೆಯ ಧರ್ಮ ನಿಳೆಯು ಜೋ ।
ಫಲಿತ ಪುಣ್ಯ ನೀಡರಿಯು ಜೋ
ಬಯಸಿದಾ । ಬಯಕೆ ಜೋ ॥ ೩ ॥

ಹಾಡಿದವರು : **ಶಾಂತವ್ವ ಹರಿಜನ ಧೂಳಿಕೊಪ್ಪ**



## ಗೌರಿ ಹಾಡು

ಸಜ್ಜಿ ತೆನಿವ್ಯಾಲೆ ಗುಜ್ಜಿ ಪಾತರ ನಾಡಿ
ದೊಡ್ಡವರ ಮಗಳ ಗೌರವ ಕೋಲ ॥ ೧ ॥

ದೊಡ್ಡವರ ಹೀ ಮಗಳ ಬಾಗಲ ಮುಂದ ಗದ್ದರಿಸಿ
ಕೋಲ ಹೊಯಿದಾರ ಕೋಲ ॥ ೨ ॥

ಚಿನ್ನನ ಧೂಳಿಕೊಪ್ಪ ಬಳ್ಳಾದ ಬಾಗಲ ಮುಂದ ಗದ್ದರಿಸಿ
ಕೋಲ ಹೊಯಿದಾರ ಕೋಲ ॥ ೩ ॥

ಅಕ್ಕನು ರಂಗಾಡಿ ಇಕ್ಕನು ರಂಗಾಡಿ ಎಕ್ಕ ಹೊಯಿಲವ್ವ
ಚಿನಿಕೋಲ ಕೋಲ ॥ ೪ ॥

ಎಕ್ಕ ಹೊಯಿಲವ್ವ ಚಿನಿಕೋಲ ನನ ಧೂಳಿಕೊಪ್ಪ
ಮುತ್ತಿನ ಚವಡಲ್ಲಿ ಒಳಗೆಲ್ಲ ॥ ೫ ॥

ಹಿತ್ತಲದಾಗ ಬತ್ತಿದ ಬಾಳಿ ಎಲೆಯು ಇಕ್ಕ ನಿಮ್ಮ್ಯವರಿಗೆ
ಹುಳಿನುಚ್ಚ ಹುಳಿನುಚ್ಚ ಉಣ್ಣಾಕ ಬರಗೆಟ್ಟ ಬಂದಿಲ್ಲಾ ॥ ೬ ॥

ಹತ್ತೆಮ್ಮಿ ತೊರೆದ ನೊರೆಹಾಲು ಉಣ್ಣುವಂಥ
ಸೆಟ್ಟರ ಬಂದಾರ ಕರಿಲಾಕ ಕೋಲ ॥ ೭ ॥

ಹಾಡಿದವರು : **ಶಾಂತವ್ವ ನಿಂಗಪ್ಪ ಹರಿಜನ**
ಹಾಗೂ ಸಂಗಡಿಗರು

"ಜನಪದ ಮಂಗಲ ಗೀತೆಗಳು" ಸಂಕಲನದಲ್ಲಿ ಉತ್ತರ ಕರ್ನಾಟಕದ ವಿವಿಧ ದೈವಗಳನ್ನು ಕುರಿತ ಹಾಡುಗಳ ಜೊತೆಗೆ, ಸೋಬಾನೆ ಹಾಡುಗಳೂ ಹೆಚ್ಚಾಗಿ ಸೇರಿವೆ. ಒಂದೆರಡು ಕೋಲಾಟದ ಪದಗಳೂ ಕಂಡುಬರುತ್ತವೆ. ಸಂಪ್ರದಾಯದ ಪದಗಳೂ ಹೆಚ್ಚಾಗಿ ಕಂಡುಬರುತ್ತವೆ. ಈ ಎಲ್ಲ ಹಾಡುಗಳನ್ನು ಶ್ರೀಮತಿ ಜಯಶ್ರೀ ಗುತ್ತಲ ಅವರು ಒಪ್ಪವಾಗಿ ಸಂಗ್ರಹಿಸಿ ಕೊಟ್ಟಿದ್ದಾರೆ. ಹಾಡುಗರ ಹೆಸರನ್ನು ಆಯಾ ಹಾಡಿನ ಕೆಳಗೇ ಸೂಚಿಸಿದ್ದಾರೆ. ಸ್ವತಃ ಗಾಯಕಿಯಾಗಿ ಹೆಸರುಮಾಡಿರುವ ಶ್ರೀಮತಿ ಜಯಶ್ರೀ ಗುತ್ತಲ ಅವರು ಈ ಸಂಕಲನವನ್ನು ಸಿದ್ಧ ಮಾಡಿ ಕೊಟ್ಟಿದ್ದಕ್ಕಾಗಿ ಅಕಾಡೆಮಿಯ ಪರವಾಗಿ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಡಾ. ಜೀ.ಶಂ.ಪ.